# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## 87ನೇ ಸಾಮಾನ್ಯ ಸಿಂಡಿಕೇಟ್ ಸಭೆ
## ಹಾಗೂ 2024ನೇ ಸಾಲಿನ 4ನೇ ಸಭೆಯ
## ನಡಾವಳಿಗಳು

ದಿನಾಂಕ : ಬುಧವಾರ, 21-08-2024

ಸಮಯ : ಪೂವಾಹ್ನ 11:00 ಘಂಟೆ

ಸ್ಥಳ : ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ,ಬೆಳಗಾವಿ.

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **87ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2024ನೇ ಸಾಲಿನ 4ನೇ ಸಭೆಯನ್ನು**, ದಿನಾಂಕ 21 ಆಗಸ್ಟ್ 2024 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

### I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಡಾ. ಎಸ್. ಬಿ. ಉಕಲಿ | ಸದಸ್ಯರು |
| 6. | ಪ್ರೊ. ಸಿದ್ಧಗೌಡ ಪಾಟೀಲ್ | ಸದಸ್ಯರು |
| 7. | ಡಾ. ಎಸ್. ಎ. ಪತಂಗಿ | ಸದಸ್ಯರು |
| 8. | ಡಾ. ಶಾರದಾಮಣಿ ಎಸ್ ಹುಣಶಾಳ | ಸದಸ್ಯರು |
| 9. | ಶ್ರೀ ರವೀಂದ್ರನಾಥ ಕದಮ್, **(ಕುಲಸಚಿವರು(ಮೌಲ್ಯಮಾಪನ)** | ಸದಸ್ಯರು |
| 10. | ಶ್ರೀಮತಿ ಸಪ್ನಾ, **ಹಣಕಾಸು ಅಧಿಕಾರಿಗಳು** | ವಿಶೇಷ ಆಹ್ವಾನಿತರು |
| 11. | ಶ್ರೀ. ಸಂತೋಷಕುಮಾರ ಕಾಮಗೌಡ (ಕೆ.ಎ.ಎಸ್. (ಹಿರಿಯ ಶ್ರೇಣಿ) | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

### II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

### ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: ದಿನಾಂಕ 21 ಆಗಸ್ಟ್ 2024 ರಂದು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ನಡೆದ ವಿಶ್ವವಿದ್ಯಾಲಯದ 87ನೇ ಹಾಗೂ 2024ನೇ ಸಾಲಿನ 4ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 02.08.2024
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 02.08.2024.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 87ನೇ ಹಾಗೂ 2024 ನೇ ಸಾಲಿನ 4 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 21.08.2024 ರಂದು ಪೂವಾಹ್ನ 11.00 ಗಂಟೆಗೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಆಯೋಜನೆ ಮಾಡಲಾಗಿತ್ತು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಸರ್ಕಾರದಿಂದ ನೂತನವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವರಾಗಿ ಶ್ರೀ ಸಂತೋಷ ಕಾಮಗೌಡ, ಕೆ.ಎ.ಎಸ್. ಹಿರಿಯ ಶ್ರೇಣಿ ಇವರು ನಿಯೋಜನೆಗೊಂಡಿರುವ ಬಗ್ಗೆ ಸಭೆಗೆ ತಿಳಿಸಿದರು. ಸದರಿಯವರು ಹಲವಾರು ಜನಪರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು, ಮುಖ್ಯವಾಗಿ ವಿದ್ಯಾರ್ಥಿಗಳ ಬಗ್ಗೆ ವಿಶೇಷ ಒಲವು ಹೊಂದಿರುತ್ತಾರೆ. ಅವರ ಸಾಮಾಜಿಕ ಕಾಳಜಿ, ಸ್ನೇಹ ಪರತೆ ಮತ್ತು ಸೇವಾ ಅನುಭವ ವಿಶ್ವವಿದ್ಯಾಲಯಕ್ಕೆ ಒಂದು ದೊಡ್ಡ ಶಕ್ತಿಯಾಗಿ ಹೊರಹೊಮ್ಮಲಿ ಎಂದು ತಿಳಿಸಿ ನೂತನ ಕುಲಸಚಿವರನ್ನು ಸಭೆಗೆ ಬರಮಾಡಿಕೊಂಡರು. ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ (PM-Usha) ಯೋಜನೆಯಡಿಯಲ್ಲಿ ವಿಶ್ವವಿದ್ಯಾಲಯಕ್ಕೆ 100 ಕೋಟಿ ರೂಪಾಯಿಗಳ ಮಂಜೂರಾತಿ ಆದೇಶ ಬಂದಿರುವ ಸಂತಸದ ವಿಷಯವನ್ನು ಹಂಚಿಕೊಂಡು ತ್ವರಿತವಾಗಿ ಕಟ್ಟಡ ಕಾಮಗಾರಿ ಮತ್ತು ವೈಜ್ಞಾನಿಕ ಉಪಕರಣಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. ಅಲ್ಲದೇ, ಕೆನರಾ ಬ್ಯಾಂಕ್ ವತಿಯಿಂದ ವಿಶ್ವವಿದ್ಯಾಲಯಕ್ಕೆ ಸಿ.ಎಸ್.ಆರ್. ಅಡಿಯಲ್ಲಿ ಮಹಿಂದ್ರಾ ಬಸ್ ದೊರೆತಿದ್ದು, ಕೆನರಾ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರಿಗೆ ಧನ್ಯವಾದ ತಿಳಿಸಿದರು. ಇದೇ ಸಂದರ್ಭದಲ್ಲಿ ನಿಕಟಪೂರ್ವ ಕುಲಸಚಿವರಾದ ರಾಜಶ್ರೀ ಜೈನಾಪೂರ ಇವರು ಕಳೆದ 18 ತಿಂಗಳಿಂದ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಹಲವಾರು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ವಿಶ್ವವಿದ್ಯಾಲಯದ ಏಳ್ಗೆಗೆ ಸದರಿಯವರು ನೀಡಿರುವ ಕೊಡುಗೆಯನ್ನು ಸ್ಮರಿಸಿದ ಮಾನ್ಯ ಕುಲಪತಿಗಳು ಮುಂದಿನ ದಿನಗಳಲ್ಲಿ ಅವರಿಗೆ ಅಭಿನಂದನಾ ಪತ್ರ ಬರೆದು ತಿಳಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ತದನಂತರ, ಮತ್ತೊಮ್ಮೆ ಹಾಜರಿದ್ದ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

ಸದಸ್ಯರಾದ ಶ್ರೀ ಈರಣ್ಣ ಬ. ಹಪ್ಪಲಿ ಇವರು ಮಾತನಾಡಿ ಕಳೆದ ಸಿಂಡಿಕೇಟ್ ಸಭೆಯಲ್ಲಿ ತಮ್ಮನ್ನು ಟೆಂಡರ್ ಕಮಿಟಿ ಸದಸ್ಯರಾಗಿ ನಾಮನಿರ್ದೇಶಿಸಿದ್ದು ತದನಂತರ ಹೌಸಕೀಪಿಂಗ, ಸೆಕ್ಯೂರಿಟಿ ಮತ್ತು ಇನ್ನಿತರೇ ಕಾಮಗಾರಿಗಳ ಟೆಂಡರಗಳನ್ನು ತಮ್ಮ ಗಮನಕ್ಕೆ ತರದೇ ತರಾತುರಿಯಲ್ಲಿ ಕೈಗೊಳ್ಳಲಾಗಿದೆ. ಈ ಕುರಿತು ಕಟ್ಟಡ ವಿಭಾಗದ ಸಹಾಯಕ ಕುಲಸಚಿವರಾದ ಶ್ರೀ ಶ್ರೀನಿವಾಸ ಹಡಾಡಿ ಇವರಿಗೆ ಮಾಹಿತಿ ಕೋರಿದಾಗ ಸದರಿಯವರು ಅಸ್ಪಷ್ಟವಾದ ಮಾಹಿತಿಯನ್ನು ನೀಡಿರುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಸದರಿ ವಿಷಯವನ್ನು ಪರಿಶೀಲಿಸುವುದಾಗಿ ತಿಳಿಸಿದರು.

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 87 ನೇ ಹಾಗೂ 2024 ನೇ ಸಾಲಿನ 4 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 21-08-2024 ರಂದು ಕೈಗೊಂಡ ತೀರ್ಮಾನಗಳು.

| ಕ್ರ ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2024/08/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| ತೀರ್ಮಾನ | | ದಿನಾಂಕ 14.06.2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿ ಅನುಮೋದನೆ ನೀಡಿತು. |
| 02 | 2024/08/02 | ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ(NOC) ಮತ್ತು ಸೇವಾ ಪ್ರಮಾಣ ಪತ್ರ ನೀಡಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಾಣಿಸಿದ ಬೋಧಕೇತರ ಸಿಬ್ಬಂದಿಗಳಿಗೆ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ(NOC) ಮತ್ತು ಸೇವಾ ಪ್ರಮಾಣ ಪತ್ರ ನೀಡಿರುವ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು. |

| ಸಂ | ಬೋಧಕೇತರ ಸಿಬ್ಬಂದಿಗಳ ಹೆಸರು | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ವಿಭಾಗ |
|---|---|---|---|
| 1 | ಶ್ರೀ ಮಾರುತಿ ಕರಿಯವರ | ದ್ವಿತೀಯ ದರ್ಜೆ ಸಹಾಯಕರು | ಪಿಎಚ್.ಡಿ. ವಿಭಾಗ |
| 2 | ಶ್ರೀ ಕುಮಾರ ಗಸ್ತಿ | ವಾಹನ ಚಾಲಕರು | ಕುಲಸಚಿವರ ಕಾರ್ಯಾಲಯ |
| 3 | ಶ್ರೀ ನಿಸಾರ ಅಹ್ಮದ ಮುಲ್ಲಾ | ವಾಹನ ಚಾಲಕರು | ಕುಲಸಚಿವರ ಕಾರ್ಯಾಲಯ |

| ಕ್ರ ಸಂ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 03 | 2024/08/03 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಆಡಳಿತ ವಿಭಾಗಗಳಿಗೆ ನಿರ್ದೇಶಕರು, ಮುಖ್ಯಸ್ಥರು, ನೋಡಲ್ ಅಧಿಕಾರಿಗಳು, ಸಂಯೋಜಕರು ಮತ್ತು ನಿಲಯಪಾಲಕರನ್ನು ನೇಮಕ ಮಾಡಿದ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸುವ ಕುರಿತು. |
| ತೀರ್ಮಾನ | | ವಿಶ್ವವಿದ್ಯಾಲಯದಲ್ಲಿ ಸುಗಮ ಆಡಳಿತದ ಹಿತದೃಷ್ಟಿಯಿಂದ ಈ ಕೆಳಗೆ ತಿಳಿಸಿರುವಂತೆ ವಿವಿಧ ವಿಭಾಗಗಳಿಗೆ ನಿರ್ದೇಶಕರು, ಮುಖ್ಯಸ್ಥರು, ನೋಡಲ್ ಅಧಿಕಾರಿಗಳು, ಸಂಯೋಜಕರುಗಳು ಮತ್ತು ನಿಲಯಪಾಲಕರುಗಳನ್ನು ನೇಮಕ ಮಾಡಿ ಆದೇಶಿಸಲಾಗಿದೆ. ದಾಖಲಾತಿಗಳನ್ನು ಪರಿಶೀಲಿಸಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |

| ಕ್ರ.ಸಂ | ವಿಭಾಗ ಮತ್ತು ಹುದ್ದೆ | ಹೊಸದಾಗಿ ನಾಮನಿರ್ದೇಶನ ಮಾಡಿದ ಬೋಧಕ ಸಿಬ್ಬಂದಿಯ ಹೆಸರು. |
|---|---|---|
| 01 | ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ | ಪ್ರೊ. ವಾಯ್. ಎಸ್. ಬಲವಂತಗೋಳ<br>ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ |
| 02 | ನಿರ್ದೇಶಕರು, ಪಿ.ಎಂ.ಇ.ಬಿ. ವಿಭಾಗ | ಪ್ರೊ. ವಿಶ್ವನಾಥ ಬಿ. ಅವಟಿ<br>ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ |
| 03 | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ಪ್ರೊ. ಅಶೋಕ ಅಂಟ್ಯೋನಿ ಡಿ'ಸೋಜಾ<br>ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ |
| 04 | ನಿರ್ದೇಶಕರು, ಎಸ್.ಸಿ/ಎಸ್.ಟಿ ಕೋಶ | ಪ್ರೊ. ವ್ಹಿ. ಎಸ್. ಶೀಗೆಹಳ್ಳಿ<br>ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ |
| 05 | ನಿರ್ದೇಶಕರು, ಮಹಿಳಾ ಸಬಲೀಕರಣ ಕೋಶ | ಪ್ರೊ. ಚಂದ್ರಿಕಾ ಕೆ. ಬಿ.<br>ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ |
| 06 | ನಿರ್ದೇಶಕರು,ಸ್ನಾತಕೋತ್ತರಅಧ್ಯಯನ ವಿಭಾಗಗಳು | ಪ್ರೊ. ಎಸ್. ಸಿ ಪಾಟೀಲ<br>ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ |
| 07 | ನಿರ್ದೇಶಕರು, ರಾಣಿ ಚನ್ನಮ್ಮ ಅಧ್ಯಯನ ಪೀಠ | ಪ್ರೊ. ನಾಗರತ್ನಾ ಪರಾಂಡೆ<br>ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ |
| 08 | ನಿರ್ದೇಶಕರು, ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠ | ಪ್ರೊ. ಬಿ. ಎಸ್. ನಾವಿ,<br>ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ |
| 09 | ವಿಶೇಷಾಧಿಕಾರಿಗಳು, ವಿದ್ಯಾಮಂಡಳ ವಿಭಾಗ | |
| 10. | ನಿರ್ದೇಶಕರು, ಪಿ. ಜಿ.ಜಿಮಖಾನಾ | ಪ್ರೊ. ಮನೀಷಾ ನೇಸರಕರ<br>ಪ್ರಾಧ್ಯಾಪಕರು, ಮರಾಠಿ ವಿಭಾಗ |

| | | |
|---|---|---|
| 11 | ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ವಿಜಯಪುರ | ಪ್ರೊ. ಎಸ್. ಎಂ. ಗಂಗಾಧರಯ್ಯ<br>ಪ್ರಾಧ್ಯಾಪಕರು, ಕನ್ನಡ ವಿಭಾಗ |
| 12 | ನಿರ್ದೇಶಕರು, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗ | ಪ್ರೊ. ಎಂ. ಜಿ. ಹೆಗಡೆ<br>ನಿವೃತ್ತ ಪ್ರಾಧ್ಯಾಪಕರು ಹಾಗೂ ಪ್ರಾಚಾರ್ಯರು, ಸಂ.ರಾ.ಪ್ರ.ದ.ಫ ಮಹಾವಿದ್ಯಾಲಯ, ಬೆಳಗಾವಿ |
| 13 | ನಿರ್ದೇಶಕರು (ಪ್ರಭಾರಿ)ಡಾ. ಬಿ. ಆರ್. ಅಂಬೇಡ್ಕರ ಅಧ್ಯಯನ ಪೀಠ | ಡಾ. ಕವಿತಾ ಕುಸಗಲ್<br>ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ |
| 14 | ಪ್ರಭಾರಿ ನಿರ್ದೇಶಕರು, ಐ. ಟಿ. ಕೋಶ & ನೋಡಲ್ ಅಧಿಕಾರಿ, *UTSAH Portal* & ಸಂಯೋಜಕರು, AISHE ವಿಭಾಗ | ಡಾ. ಕಿರಣ ಪ್ರಕಾಶ ಸವಣೂರ<br>ಸಹ ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಹಿತಿ ವಿಜ್ಞಾನವಿಭಾಗ |
| 15 | ಪ್ರಭಾರಿ ನಿರ್ದೇಶಕರು, ಪ್ರಸಾರಾಂಗ | ಡಾ. ಪೂಜಾ ಹಲ್ಯಾಳ<br>ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ |
| 16 | ಸಹಾಯಕ ನಿರ್ದೇಶಕರು, ಪ್ರಸಾರಾಂಗ & ಸಂಯೋಜಕರು, ಐ.ಕ್ಯೂ.ಎ.ಸಿ. ವಿಭಾಗ | ಡಾ. ಸಚೇಂದ್ರ ಜಿ. ಆರ್<br>ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ |
| 17 | ನಿಲಯ ಪಾಲಕರು,ಕೃಷ್ಣಾ ವಸತಿ ನಿಲಯ | ಡಾ. ದೇವರಾಜು<br>ಸಹಾಯಕ ಪ್ರಾಧ್ಯಾಪಕರು ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ |
| 18 | ನಿಲಯ ಪಾಲಕರು,ಮಹಿಳಾ ವಸತಿ ನಿಲಯ | ಡಾ. ದೇವತಾ ಗಸ್ತಿ<br>ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ |
| 19 | ಸಂಯೋಜಕರು, ಐ. ಟಿ. ಕೋಶ | ಡಾ. ಮಲ್ಲಮ್ಮ ರೆಡ್ಡಿ<br>ಸಹಾಯಕ ಪ್ರಾಧ್ಯಾಪಕರು,ಗಣಕ ವಿಜ್ಞಾನ ವಿಭಾಗ |
| 20 | ಸಂಯೋಜಕರು, ಸಾಂಸ್ಕೃತಿಕಚಟುವಟಿಕೆ. ಜಿಮಖಾನಾ | ಡಾ. ಮಂಜುನಾಥ ಎನ್. ಕೆ<br>ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ |
| 21 | ಸಂಯೋಜಕರು,ಕ್ರೀಡಾಚಟುವಟಿಕೆ, ಜಿಮಖಾನಾ | ಶ್ರೀ. ಚಂದ್ರಶೇಖರ ಎಸ್. ವಿ<br>ಸಹಾಯಕ ಪ್ರಾಧ್ಯಾಪಕರು, ಅಪರಾಧಶಾಸ್ತ್ರ ವಿಭಾಗ |
| 22 | ಪ್ರಭಾರಿ ಸಂಯೋಜಕರು, ಎನ್.ಎಸ್.ಎಸ್. ಘಟಕ | ಡಾ. ಕನಕಪ್ಪ ಪೂಜಾರ<br>ಸಹಾಯಕ ಪ್ರಾಧ್ಯಾಪಕರು ಶಿಕ್ಷಣ ವಿಭಾಗ |
| 23 | ಸಂಯೋಜಕರು,ಡಾ. ಬಿ. ಆರ್. ಅಂಬೇಡ್ಕರಅಧ್ಯಯನ ಪೀಠ | ಡಾ. ಸುಷ್ಮಾ ಆರ್.<br>ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ |
| 24 | ಸಂಯೋಜಕರು ವಾಣಿಜ್ಯ ಮತ್ತು ಆಡಳಿ ಮತ್ತು ವ್ಯವಹಾರ ನಿರ್ವಹಣಾ ವಿಭಾಗಗಳು(Alumini Activities)&<br>ನೋಡಲ್ ಅಧಿಕಾರಿಗಳು, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ | ಡಾ. ಮಹಾಂತೇಶ ಕುರಿ.<br>ಸಹಾಯಕ ಪ್ರಾಧ್ಯಾಪಕರು, ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ |
| 25 | ಸಂಯೋಜಕರು, ಸಂಗೊಳ್ಳಿ ರಾಯಣ್ಣ ಅಧ್ಯಯನ ಪೀಠ | ಡಾ. ಮಹೇಶ್ವರಿ ಕಾಚಾಪುರ,<br>ಸಹಾಯಕ ಪ್ರಾಧ್ಯಾಪಕರು, ಅಪರಾಧಶಾಸ್ತ್ರ ವಿಭಾಗ |
| 26 | ಸಂಯೋಜಕರು, ಉದ್ಯೋಗ ಕೋಶ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯ ಚಟುವಟಿಕೆ (Alumini Activities) ಕಲಾ ವಿಭಾಗಗಳು | ಡಾ. ಕಿರಣಕುಮಾರ ಪಿ<br>ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ |
| 27 | ಸಂಯೋಜಕರು, ಉದ್ಯೋಗ ಕೋಶ ಮತ್ತು ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯಚಟುವಟಿಕೆ (Alumini Activities) ವಿಜ್ಞಾನ ವಿಭಾಗಗಳು | ಡಾ. ನಂದಿನಿ ದೇವರಮನಿ<br>ಸಹಾಯಕ ಪ್ರಾಧ್ಯಾಪಕರು, ಅಪರಾಧಶಾಸ್ತ್ರ ವಿಭಾಗ |

| | | | | |
|---|---|---|---|---|
| | | 28 | ನೋಡಲ್ ಅಧಿಕಾರಿಗಳು,<br>ಸಕಾಲ ಹಾಗೂ ಸೇವಾ ಸಿಂಧು ಯೋಜನೆ | ಡಾ. ಮಧುಶ್ರೀ ಕಳ್ಳಿಮನಿ<br>ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ |
| | | 29 | Programme Officer, ಎನ್.ಎಸ್.ಎಸ್. ಘಟಕ | ಡಾ. ಅಶ್ವಿನಿ ಜಮುನಿ<br>ಸಹಾಯಕ ಪ್ರಾಧ್ಯಾಕರು, ವಾಣಿಜ್ಯಶಾಸ್ತ್ರ ವಿಭಾಗ |
| | | 30 | Programme Officer, ಎನ್.ಎಸ್.ಎಸ್. ಘಟಕ | ಡಾ. ಸಂತೋಷ ಪಾಟೀಲ<br>ಸಹಾಯಕ ಪ್ರಾಧ್ಯಾಪಕರು,<br>ಸಮಾಜಕಾರ್ಯ ವಿಭಾಗ |

| | | |
|---|---|---|
| 04 | 2024/08/04 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ ವಿವಿಧ ವಿಭಾಗಗಳ ಅಧ್ಯಾಪಕರುಗಳನ್ನು ಹಾಗೂ ಉಪ ಗ್ರಂಥಪಾಲಕರನ್ನು ವರ್ಗಾವಣೆ ಮಾಡಿದ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ನೀಡುವ ಕುರಿತು. |

**ತೀರ್ಮಾನ**

**ವಿಶ್ವವಿದ್ಯಾಲಯದಲ್ಲಿ ಸುಗಮ ಆಡಳಿತದ ಹಿತದೃಷ್ಟಿಯಿಂದ ಈ ಕೆಳಗೆ ತಿಳಿಸಿರುವಂತೆ ವಿವಿಧ ವಿಭಾಗಗಳ ಅಧ್ಯಾಪಕರುಗಳನ್ನು ಹಾಗೂ ಉಪ ಗ್ರಂಥಪಾಲಕರನ್ನು ವರ್ಗಾವಣೆ ಮಾಡಲಾಗಿದೆ. ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.**

| ಕ್ರಸ | ಸಿಬ್ಬಂದಿಯ ಹೆಸರು | ವರ್ಗಾವಣೆ ಮಾಡಿದ ಸ್ಥಳ |
|---|---|---|
| 01 | ಡಾ. ಮಹೇಶ ಗಾಜಪ್ಪನವರ<br>ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ರಾಚವಿ, ಬೆಳಗಾವಿ. | ಕನ್ನಡ ವಿಭಾಗ<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ. |
| 02 | ಡಾ. ಸುನೀಲಕುಮಾರ ಹೊಸಮನಿ<br>ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ,<br>ರಾಚವಿ, ಬೆಳಗಾವಿ. | ಗಣಿತಶಾಸ್ತ್ರ ವಿಭಾಗ<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ. |
| 03 | ಡಾ. ಟಿ. ಆರ್. ಅರುಣಕುಮಾರ<br>ಸಹಾಯಕ ಪ್ರಾಧ್ಯಾಪಕರು<br>ಗಣಕ ವಿಜ್ಞಾನ ವಿಭಾಗ<br>ರಾಚವಿ, ಬೆಳಗಾವಿ. | ಗಣಕ ವಿಜ್ಞಾನ ವಿಭಾಗ<br>ಸ್ನಾತಕೋತ್ತರ ಕೇಂದ್ರ, ವಿಜಯಪುರ. |
| 04 | ಡಾ. ಸುಮನ ಮುದ್ದಾಪೂರ<br>ಉಪ ಗ್ರಂಥಪಾಲಕರು,<br>ಸಂ.ರಾ.ಪ್ರ.ಘ.ಮಹಾವಿದ್ಯಾಲಯ, ಬೆಳಗಾವಿ. | ಗ್ರಂಥಾಲಯ ವಿಭಾಗ<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ. |
| 05 | ಡಾ. ಭವಾನಿಶಂಕರ ನಾಯಕ<br>ಉಪ ಗ್ರಂಥಪಾಲಕರು, ಗ್ರಂಥಾಲಯ ವಿಭಾಗ,<br>ರಾಚವಿ, ಬೆಳಗಾವಿ. | ಗ್ರಂಥಾಲಯ ವಿಭಾಗ<br>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ. |

| | | |
|---|---|---|
| 05 | 2024/08/05 | ವಿಶ್ವವಿದ್ಯಾಲಯದ ಕಲಾ ನಿಖಾಯಕ್ಕೆ ಡೀನರು ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರನ್ನಾಗಿ ನೇಮಿಸಿ ಆದೇಶಿಸಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸುವ ಕುರಿತು. |

**ತೀರ್ಮಾನ**

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಲಾ ನಿಖಾಯದ ಡೀನರ ಅವಧಿ ಮುಕ್ತಾಯವಾದ ಹಿನ್ನಲೆ ಜೇಷ್ಠತೆ ಆಧಾರದ ಮೇಲೆ ಓರ್ವ ಹಿರಿಯ ಪ್ರಾಧ್ಯಾಪಕರನ್ನು ಕಲಾ ನಿಖಾಯಕ್ಕೆ ಡೀನರನ್ನು ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರ ಅವಧಿಯು ಮುಕ್ತಾಯವಾದ ಹಿನ್ನಲೆಯಲ್ಲಿ, ಸದರಿ ವಿಭಾಗದ ಜೇಷ್ಠತೆ/ಸರದಿ ಆಧಾರದ ಮೇಲೆ ಈ ಕೆಳಕಾಣಿಸಿದಂತೆ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿ/ಮುಂದುವರೆಸಿ ಆದೇಶಿಸಲಾಗಿದೆ. ಆದ್ದರಿಂದ ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.**

| ಸಂ | ನಿಖಾಯ | ಈ ಮೊದಲ ಡೀನರು | ಹೊಸದಾಗಿ ನಾಮನಿರ್ದೇಶನಗೊಂಡ ಡೀನರು |
|---|---|---|---|
| 1 | ಕಲಾ ನಿಖಾಯ | ಪ್ರೊ. ವ್ಹಿ. ಎಫ್. ನಾಗಣ್ಣವರ<br>ಹಿರಿಯ ಪ್ರಾಧ್ಯಾಪಕರು,<br>ಇಂಗ್ಲೀಷ ವಿಭಾಗ | ಪ್ರೊ. ಡಿ.ಎನ್. ಪಾಟೀಲ್,<br>ಪ್ರಾಧ್ಯಾಪಕರು,<br>ಅರ್ಥಶಾಸ್ತ್ರ ವಿಭಾಗ |

| ಸಂ | ವಿಭಾಗ | ಈ ಮೊದಲ ಮುಖ್ಯಸ್ಥರು | ಹೊಸದಾಗಿ ನಾಮನಿರ್ದೇಶನಗೊಂಡ ಮುಖ್ಯಸ್ಥರು |
|---|---|---|---|
| 1 | ಮರಾಠಿ ವಿಭಾಗ | ಪ್ರೊ. ಸಿ. ಎನ್. ವಾಘಮಾರೆ, ಪ್ರಾಧ್ಯಾಪಕರು | ಪ್ರೊ. ಮನೀಷಾ ನೇಸರಕರ,<br>ಪ್ರಾಧ್ಯಾಪಕರು |

| | | | |
|---|---|---|---|
| 2 | ಅರ್ಥಶಾಸ್ತ್ರ ವಿಭಾಗ | ಪ್ರೊ. ಡಿ. ಎನ್. ಪಾಟೀಲ್ ಪ್ರಾಧ್ಯಾಪಕರು | ಡಾ. ಕಿರಣಕುಮಾರ .ಪಿ. ಸಹ ಪ್ರಾಧ್ಯಾಪಕರು |
| 3 | ರಾಜ್ಯಶಾಸ್ತ್ರ ವಿಭಾಗ | ಪ್ರೊ. ಕಮಲಾಕ್ಷಿ ತಡಸದ, ಪ್ರಾಧ್ಯಾಪಕರು | ಪ್ರೊ. ಕಮಲಾಕ್ಷಿ ತಡಸದ, ಪ್ರಾಧ್ಯಾಪಕರು |
| 4 | ಇತಿಹಾಸ ವಿಭಾಗ | ಡಾ. ಚಂದ್ರಕಾಂತ ಕೋಳಿಗುಡ್ಡೆ, ಸಹಾಯಕ ಪ್ರಾಧ್ಯಾಪಕರು | ಪ್ರೊ. ಕೆ. ಎಲ್. ಎನ್. ಮೂರ್ತಿ, ಪ್ರಾಧ್ಯಾಪಕರು |

| | | |
|---|---|---|
| 06 | 2024/08/06 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದ್ದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು. |
| ತೀರ್ಮಾನ | | **ವಿಶ್ವವಿದ್ಯಾಲಯದ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದ್ದಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |

| Sl No | Name of the Teaching Staff | Details of permission to apply | Post applied |
|---|---|---|---|
| 1 | Prof. Vijay F. Nagannawar Senior Professor, Department of English. | Central University of Gujarat, Sector-29, Gandhinagar-382030, Gujarata, India | Vice-Chancellor |
| | | Hemvati Nandan Bahuguna Garhwal University, Garhwal, Uttarakhand(A central University) | |
| | | Indira Gandhi National Tribal University, Amarkantak, Village-Lalpur Dist-Anuppur, Mady Pradesh( A Central University) | |
| 2 | Prof. Basavaraj Padmashali Senior Professor, Department of Chemistry. | Central University of Gujarat, Sector-29, Gandhinagar-382030, Gujarata, India | Vice-Chancellor |
| | | Hemvati Nandan Bahuguna Garhwal University, Garhwal, Uttarakhand(A central University) | |

| | | |
|---|---|---|
| 07 | 2024/08/07 | ಶ್ರೀ ಸುಲೇಮಾನ ನದಾಫ, ತಾಂತ್ರಿಕ ಸಹಾಯಕರು, ಕೇಂದ್ರಿಯ ವಿಶ್ವವಿದ್ಯಾಲಯ, ಅನಂತಪುರ, ಆಂದ್ರಪ್ರದೇಶ ಇವರನ್ನು ನಿಯೋಜನೆ ಮೇಲೆ ನೇಮಕ ಮಾಡಿಕೊಳ್ಳಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದಕ್ಕೆ ಅನುಸಮರ್ಥನೆ ನೀಡುವ ಕುರಿತು. |
| ತೀರ್ಮಾನ | | **ಶ್ರೀ ಸುಲೇಮಾನ ನದಾಫ ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಅನಂತಪುರ, ಆಂಧ್ರಪ್ರದೇಶ ಇಲ್ಲಿ ಪೂರ್ಣಾವಧಿ ತಾಂತ್ರಿಕ ಸಹಾಯಕರೆಂದು ಸೇವೆ ಸಲ್ಲಿಸುತ್ತಿದ್ದು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಗೆ ತಾಂತ್ರಿಕ ಸಹಾಯಕ ಹುದ್ದೆಗೆ(Technical Assistant) ನಿಯೋಜನೆ ಮೇಲೆ ನೇಮಕ ಮಾಡಿಕೊಳ್ಳಲು ವಿನಂತಿಸಿಕೊಂಡಿರುತ್ತಾರೆ. ಸದರಿಯವರ ಸೇವೆಯು ಯುಯುಸಿಎಂಎಸ್ ಹಾಗೂ ಇನ್ನಿತರ ತಾಂತ್ರಿಕ ಕಾರ್ಯಗಳಿಗೆ ಸಹಾಯವಾಗುವದರಿಂದ ಸದರಿಯವರಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗಿರುವ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |
| 08 | 2024/08/08 | ನೇರ ನೇಮಕಾತಿ ಹಾಗೂ ಸಿ.ಎ.ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿಯನ್ನು ನೀಡುವ ಸಂದರ್ಭದಲ್ಲಿ ಬೇಕಾಗುವ ವಿಷಯ ತಜ್ಞರ ಹೆಸರುಗಳನ್ನು, ವಿಭಾಗಗಳ ಮುಖ್ಯಸ್ಥರು ಮತ್ತು ಡೀನರುಗಳ ಮೂಲಕ ಸಲ್ಲಿಕೆಯಾಗಿರುವ 16 ಜನ BOA ಸದಸ್ಯರುಗಳ ಯಾದಿಗೆ ಹಾಗೂ ಒಬ್ಬರು ಹೆಸರನ್ನು ಗೌರವಾನ್ವಿತ ಕುಲಾಧಿಪತಿಗಳ ನಾಮನಿರ್ದೇಶನ ಮಾಡುವ ಸಲುವಾಗಿ ಸಲ್ಲಿಕೆಯಾಗಿರುವ ಪಟ್ಟಿಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ನೀಡುವ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ನೇರ ನೇಮಕಾತಿ ಹಾಗೂ ಸಿ.ಎ.ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿಯನ್ನು ನೀಡುವ ಸಂದರ್ಭದಲ್ಲಿ ಆಯ್ಕೆ ಸಮಿತಿಯಲ್ಲಿ ಬೇಕಾಗುವ ವಿಷಯ ತಜ್ಞರ ಹೆಸರುಗಳನ್ನು, ವಿವಿಧ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು ಮತ್ತು ಡೀನರುಗಳ ಮೂಲಕ ಸಲ್ಲಿಕೆಯಾಗಿರುವ 16 ಜನ Board of Appointment (BOA) ಸದಸ್ಯರುಗಳ ಯಾದಿಗೆ ಹಾಗೂ ಮಾನ್ಯ ಕುಲಪತಿಗಳು ನಾಮನಿರ್ದೇಶಿಸಿರುವ 03 ಹೆಸರುಗಳಲ್ಲಿ ಒಬ್ಬರು ಹೆಸರನ್ನು ನಾಮನಿರ್ದೇಶನ ಮಾಡುವ ಸಲುವಾಗಿ ಗೌರವಾನ್ವಿತ ಕುಲಾಧಿಪತಿಗಳ ಕಛೇರಿಗೆ ಸಲ್ಲಿಕೆಯಾಗಿರುವ ಪಟ್ಟಿಗೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** |

| | | |
|---|---|---|
| 09 | 2024/08/09 | 2024–25 ನೇ ಶೈಕ್ಷಣಿಕ ಸಾಲಿನ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿರುವ ಕುರಿತು. |
| ತೀರ್ಮಾನ | | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ 2024–25ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ಯುಜಿಸಿ ನಿಯಮಾನುಸಾರ ಮತ್ತು ರಾಜ್ಯ ಸರ್ಕಾರದ ನಿಯಮಾವಳಿಗಳನ್ನು ಅನುಸರಿಸಿ ತಯಾರಿಸಲಾದ ಆಯ್ಕೆ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು ಹಾಗೂ ಆಯ್ಕೆಗೊಂಡ ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳಿಗೆ ನಿಯಮಾನುಸಾರ ಗೌರವಧನ ಹಂಚಿಕೆ ಮಾಡಲು ಸೂಚಿಸಿತು. |
| 10 | 2024/08/10 | ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಮತ್ತು ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ಸರ್ಕಾರದ ಆದೇಶ ಸಂ:ಆಇ21 ಎಸ್ಆರ್‌ಪಿ 2024 ಬೆಂಗಳೂರು, ದಿನಾಂಕ: 22–07–2024 ರನ್ವಯ ಮತ್ತು ಇದಕ್ಕೆ ಸಂಬಂಧಿಸಿ ಸರ್ಕಾರದವರು ಕಾಲಕಾಲಕ್ಕೆ ಹೊರಡಿಸುವ ಆದೇಶದಂತೆ 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿ ತರಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 11 | 2024/08/11 | ಖಾಲಿ . ಇರುವ ಕಛೇರಿ ಅಧೀಕ್ಷಕರ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಪ್ರಕಟಣೆ ಹೊರಡಿಸುವ ಬಗ್ಗೆ |
| ತೀರ್ಮಾನ | | ವಿಶ್ವವಿದ್ಯಾಲಯದ ಕಛೇರಿ ನೇಮಕಾತಿ ಅಧಿಸೂಚನೆ ಸಂಖ್ಯೆ: ಆರ್‌ಸಿಯು–ಡಿಪಿಎಆರ್/ನೇಮಕಾತಿ/ಉ–ವೃಂದ/2022–23/4905, ದಿನಾಂಕ: 09.02.2023 ಮತ್ತು ತಿದ್ದುಪಡಿ ಅಧಿಸೂಚನೆ ಸಂಖ್ಯೆ: ರಾಚವಿ/ಬೆಳಗಾವಿ/ಕುಸಕಾ/ಡಿಪಿಎಆರ್/2022–23/5324 ದಿನಾಂಕ: 09.03.2023 ರನ್ವಯ ಉಳಿಕೆ ವೃಂದದ ಉಪಕುಲಸಚಿವರು–01, ಸಹಾಯಕ ಕುಲಸಚಿವರು–02, ಕಛೇರಿ ಅಧೀಕ್ಷಕರು–03 ಒಟ್ಟು 06 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕಾಗಿ ನೇಮಕಾತಿ ಅಧಿಸೂಚನೆಯನ್ನು ದಿನಪತ್ರಿಕೆ ಮತ್ತು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಸದರಿ ಪ್ರಕಟಣೆ ಅನ್ವಯ ನೇಮಕಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ನಿಯಮಾವಳಿಗಳ ಅನ್ವಯ ಕ್ರಮ ಜರುಗಿಸಿ ಉಪಕುಲಸಚಿವರು–01, ಸಹಾಯಕ ಕುಲಸಚಿವರು–02, ಕಛೇರಿ ಅಧೀಕ್ಷಕರು–02 ಒಟ್ಟು 05 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ನೇಮಕಾತಿ ಮಾಡಿಕೊಳ್ಳದೇ ಇರುವ ಕಛೇರಿ ಅಧೀಕ್ಷರು–01(ಎಸ್.ಟಿ) ಹುದ್ದೆಯನ್ನು ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ ಅಧಿಸೂಚನೆಯನ್ನು ಪ್ರಕಟಿಸಿ ನೇಮಕಾತಿಗೆ ಸಂಬಂಧಿಸಿದಂತೆ ಮುಂದಿನ ಹಂತದ ಕ್ರಮಗಳನ್ನು ಜರುಗಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 12 | 2024/08/12 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಖಾಲಿ ಇರುವ ವಿವಿಧ ವೃಂದದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಮೂಲಕ ಭರ್ತಿ ಮಾಡಿಕೊಳ್ಳುವ ಬಗ್ಗೆ |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಗೆ ಸರ್ಕಾರದಿಂದ ವಿವಿಧ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಇವುಗಳಲ್ಲಿ ವಿವಿಧ ವೃಂದದ ಕೆಲವು ಹುದ್ದೆಗಳನ್ನು ಭರ್ತಿ ಮಾಡಿಕೊಂಡಿದ್ದು, ಇನ್ನು ಕೆಲವು ಹುದ್ದೆಗಳು ಭರ್ತಿಯಾಗದೆ ಖಾಲಿ ಇರುತ್ತವೆ ಎಂಬ ಮಾಹಿತಿಯನ್ನು ಸಭೆಗೆ ಪ್ರಸ್ತುತಪಡಿಸಲಾಯಿತು.<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ವಿವಿಧ ವೃಂದದ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮತ್ತು ಅಗತ್ಯಕ್ಕೆ ಅನುಗುಣವಾಗಿ ಹುದ್ದೆಗಳನ್ನು ಸೃಜಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 13 | 2024/08/13 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಸ್ನಾತಕೋತ್ತರ ವಿಷಯಗಳಲ್ಲಿ ತುರ್ತು ಕಾರಣಗಳಿಂದ 75% ರಷ್ಟು ಹಾಜರಾತಿಯನ್ನು ಪೂರೈಸದೇ ಇರುವ ವಿದ್ಯಾರ್ಥಿಗಳಿಗೆ ಮರು ನೋಂದಣಿ ಮೂಲಕ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವ ಕುರಿತು. |
| ತೀರ್ಮಾನ | | 75% ರಷ್ಟು ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗದ ಕೆಲ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ವಿದ್ಯಾರ್ಥಿಗಳಿಗೆ ಮರು ನೋಂದಣಿ ಪಡೆದು ಓ. ಇ. ಸಿ. ವಿಷಯಗಳಿಗೆ 75% ರಷ್ಟು ಹಾಜರಾತಿಯನ್ನು ಪೂರೈಸುವ ಷರತ್ತಿನೊಂದಿಗೆ ಹಾಗೂ ಪ್ರತಿ ವಿಷಯಕ್ಕೆ ರೂ.3000/–ಗಳ ದಂಡ ಶುಲ್ಕವನ್ನು ವಿಧಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗುವಂತೆ ಅನುಮತಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆಯನ್ನು ನೀಡಿತು.<br>ಮುಂದಿನ ದಿನಗಳಲ್ಲಿ ಇಂತಹ ಕೆಲ ವಿಶೇಷ ಪ್ರಕಣಗಳಿಗೆ ಈ ನಿಯಮವನ್ನು ಪಾಲಿಸಲು ಸೂಚಿಸಿತು. |

| | | |
|---|---|---|
| 14 | 2024/08/14 | 2024–25 ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಎಲ್ಲ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿ ಶುಲ್ಕಗಳನ್ನು ಪ್ರತಿಶತ 10% ರಷ್ಟು ಹೆಚ್ಚಿಗೆ ಮಾಡಲು ಅನುಮೋದನೆ ಕುರಿತು. |
| ತೀರ್ಮಾನ | | **2023–24** ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೋರ್ಸುಗಳಿಗೆ ಉನ್ನತ ಶಿಕ್ಷಣ ಇಲಾಖೆಯು ರಚಿಸಿದ ಏಕರೂಪ ಶುಲ್ಕ ತಜ್ಞರ ಸಮಿತಿಯು ನೀಡಿದ ವರದಿಯನ್ವಯ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಏಕರೂಪ ಶುಲ್ಕಗಳನ್ನು ಅಳವಡಿಸಿಕೊಳ್ಳಲು ಹಾಗೂ ಪ್ರತಿ ವರ್ಷ ಶೇಕಡಾ **10%** ಅಥವಾ **2** ವರ್ಷಗಳಿಗೆ ಶೇಕಡಾ **20%** ರಿಂದ **25%** ರಷ್ಟು ಹೆಚ್ಚಿಸಿ ಜಾರಿಗೆ ತರಬಹುದೆಂದು ಸೂಚಿಸಿರುತ್ತಾರೆ. ಅದರಂತೆ **2023–24**ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸುಗಳಿಗೆ ಏಕರೂಪ ಶುಲ್ಕಗಳನ್ನು ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಯಥಾವತ್ತಾಗಿ ಇರುವ ಶುಲ್ಕಗಳನ್ನು ಆಕರಿಸಲು ಸಭೆಯು ಅನುಮತಿ ನೀಡಿತ್ತು.<br>ಪ್ರಸ್ತುತ **2024–25** ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಎಲ್ಲ ರೀತಿಯ (ಅರ್ಹತಾ ಪ್ರಮಾಣ ಪತ್ರ, ಪ್ರವೇಶ ರದ್ಧತಿ, ಇತರೆ) ಶುಲ್ಕಗಳನ್ನು ಪ್ರತಿಶತ ಶೇ **10%** ರಷ್ಟು ಹೆಚ್ಚಿಸಲು ಹಾಗೂ ಬೇರೆ ವಿಶ್ವವಿದ್ಯಾಲಯಗಳ (**Other University**) ಮತ್ತು ಹೆಚ್ಚುವರಿ (**Enhanced**) ಕೋಟಾದಡಿಯಲ್ಲಿ ಪ್ರವೇಶಾತಿ ಪಡೆಯುವ ಅಭ್ಯರ್ಥಿಗಳಿಗೆ ಶೇ **10%** ರಷ್ಟು ಹೆಚ್ಚಿಸಿದ ಶುಲ್ಕಗಳನ್ನು ದ್ವಿಗುಣಗೊಳಿಸಿ ಅಭ್ಯರ್ಥಿಗಳಿಂದ ಆಕರಣೆ ಮಾಡಲು ಸಭೆಯು ಅನುಮೋದನೆ ನೀಡಿತು. |
| 15 | 2024/08/15 | ರಾಣಿ ಚನ್ನಮ್ಮ ಮಹಾವಿದ್ಯಾಲಯಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಬಿ.ಎಸ್ಸಿ. ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಹಾಗೂ ಬಿ.ಸಿ.ಎ. ಕೋರ್ಸ್‌ಗೆ ಹೆಚ್ಚುವರಿ ಪ್ರವೇಶಾತಿ ನೀಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ಮಹಾವಿದ್ಯಾಲಯದ ಅಧೀನದಲ್ಲಿ ಬರುವ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ **2024–25** ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಬಿ.ಎಸ್ಸಿ. ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಕೋರ್ಸ್‌ನ ಪ್ರವೇಶ ಮಿತಿ **40** ಹಾಗೂ ಬಿ.ಸಿ.ಎ. ಕೋರ್ಸ್‌ನ ಮಿತಿ **100** ಇರುತ್ತದೆ. ಮುಂದುವರೆದು, ಸದರಿ ಕೋರ್ಸುಗಳಿಗೆ **40** ಹಾಗೂ **100** ವಿದ್ಯಾರ್ಥಿಗಳು ಈಗಾಗಲೇ ಪ್ರವೇಶ ಪಡೆದಿರುತ್ತಾರೆ.<br>ಸದರಿ ಕೋರ್ಸುಗಳ ಪ್ರವೇಶಕ್ಕಾಗಿ ಅತಿ ಹೆಚ್ಚು ಬೇಡಿಕೆ ಇರುವುದು ಕಂಡು ಬಂದಿದೆ. ಆದ್ದರಿಂದ ಈ ಕೆಳಕಾಣಿಸಿದಂತೆ ಸದರಿ ಕೋರ್ಸುಗಳಿಗೆ ಪ್ರವೇಶ ಮಿತಿ ಹೆಚ್ಚಿಸಿ ಪ್ರವೇಶವನ್ನು ಪಡೆಯಲಾಗಿದೆ. |

| SL NO | Courses | Subject | Intake |
|---|---|---|---|
| 1 | B. Sc Criminology and Forensic Science | Zoology | 10 |
| | | Geo-informatics | 10 |
| 2 | BCA | | 10 |

**2024–25** ನೇ ಶೈಕ್ಷಣಿಕ ಸಾಲಿಗೆ ಬಿ.ಎಸ್ಸಿ. ಕೋರ್ಸಿಗೆ ರೂ. **6,700/–** ಮತ್ತು ಬಿ.ಸಿ.ಎ ಕೋರ್ಸಿಗೆ ರೂ. **35,980/–**ರಂತೆ ಪ್ರವೇಶ ಶುಲ್ಕವಿದ್ದು, ಹೆಚ್ಚುವರಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ರೂ.**10,000/–** ಶುಲ್ಕದೊಂದಿಗೆ ಪ್ರವೇಶಾತಿ ನೀಡಲಾಗಿದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು.

| | | |
|---|---|---|
| 16 | 2024/08/16 | ಉನ್ನತ ಶಿಕ್ಷಣ ಇಲಾಖೆಯು ಸೂಚಿಸಿರುವ 2024–25 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಕೋರ್ಸುಗಳ ಶೈಕ್ಷಣಿಕ ವೇಳಾ ಪಟ್ಟಿಯನ್ನು ಪರಿಷ್ಕರಿಸಿ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಅನುಮೋದನೆ ಕೋರಿರುವ ಕುರಿತು. |
| ತೀರ್ಮಾನ | | **ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರು 2024–25ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಕೋರ್ಸುಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ಜಾರಿಗೊಳಿಸಿರುತ್ತಾರೆ. ಆದರೆ, ಪ್ರಸ್ತುತ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಪದವಿಯ(Under-Graduate) ಅಂತಿಮ(6ನೇ) ಸೆಮಿಸ್ಟರನ್ 2023–24ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯು ಈ ಕೆಳಗಿನಂತಿರುತ್ತದೆ.** |

| ಕ್ರ.ಸಂ. | ವಿಷಯ | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ |
|---|---|---|---|
| 01 | ತರಗತಿಗಳು | 24–05–2024 | 17–08–2024 |
| 02 | ಪರೀಕ್ಷೆಗಳು/ಮೌಲ್ಯಮಾಪನ/ಫಲಿತಾಂಶ ಇತ್ಯಾದಿ | 18–08–2024 | 20–09–2024 |

**ಸ್ನಾತಕ ಪದವಿಯ ಅಂತಿಮ (6ನೇ) ಸೆಮಿಸ್ಟರ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಕಾರ್ಯಗಳನ್ನು**

| | | |
|---|---|---|
| | | ಜರುಗಿಸಲು ದಿನಾಂಕ: **20-09-2024**ರ ವರೆಗೆ ನೀಡಿರುವುದರಿಂದ ಅಥವಾ ಕಾರಣಾಂತರಗಳಿಂದ ದಿನಾಂಕಗಳು ಮುಂದುವರೆಯುವ ಸಂಭವವಿರುವುದರಿಂದ, ವಿಶ್ವವಿದ್ಯಾಲಯದ ಸ್ನಾತಕ ಪದವಿಯ ಅಂತಿಮ (6ನೇ) ಸೆಮಿಸ್ಟರನ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪರಿಕ್ಷೆಗಳು/ಮೌಲ್ಯಮಾಪನ/ಫಲಿತಾಂಶ ಇತ್ಯಾದಿ ಕಾರ್ಯಗಳ ದಿನಾಂಕಗಳನ್ನು ಗಮನದಲ್ಲಿಟ್ಟುಕೊಂಡು, ಉನ್ನತ ಶಿಕ್ಷಣ ಇಲಾಖೆಯು ಸೂಚಿಸಿರುವ **2024-25** ನೇ ಶೈಕ್ಷಣಿಕ ವೇಳಾ ಪಟ್ಟಿಯನ್ನು ಪರಿಷ್ಕರಿಸಿ, ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಸಭೆಯ ಅನುಮೋದನೆ ನೀಡಿತು. |
| 17 | 2024/08/17 | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ Digital Desk Lab ಸ್ಥಾಪಿಸುವ ಕುರಿತು. |
| ತೀರ್ಮಾನ | | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ Digital Desk Lab ಹಾಗೂ ಇದರ ಅಡಿಯಲ್ಲಿ ಬರುವ ಎರಡು ಕೇಂದ್ರಗಳಾದ (1) Smart Digital Publishing Desk (2) Digital Cognitive Language Centre ಪ್ರಾರಂಭಿಸುವ ಕುರಿತಂತೆ ವಿವರಿಸಲು ಶ್ರೀ ಶ್ರೀನಿವಾಸ್, ಸ್ಮಾರ್ಟ ಸಿಟಿ, ಬೆಳಗಾವಿ ಇವರನ್ನು ವಿಶೇಷ ಆಹ್ವಾನಿತರೆಂದು ಸಭೆಗೆ ಆಹ್ವಾನಿಸಲಾಗಿತ್ತು. ಸದರಿಯವರು Digital Desk Lab ನ ಮಹತ್ವ, ಅವಶ್ಯಕತೆ ಮತ್ತು ಉಪಯೋಗ ಹಾಗೂ ಕಾರ್ಯರೂಪಕ್ಕೆ ತರುವ ವಿವಿಧ ಹಂತಗಳನ್ನು ಸಭೆಗೆ ತಿಳಿಸಿದರು. ಸದರಿ ಯೋಜನೆಗೆ ಹಾಗೂ ಕನ್ಸಲ್ಟಂಸಿಗಾಗಿ ಅಂದಾಜು **1** ಕೋಟಿ ರೂಪಾಯಿಗಳ ವೆಚ್ಚ ಹಾಗೂ **05** ವರ್ಷಗಳ ಗುತ್ತಿಗೆ ಅವಧಿ ಇರುತ್ತದೆ. ಇದರಿಂದ ಕಡಿಮೆ ದರದಲ್ಲಿ(Highly subsidise rate) ವೈವಿದ್ಯತೆಯಿಂದ ಕೂಡಿದ ಟಿಪ್ಪಣಿಗಳನ್ನು(Notes) ಅತ್ಯಂತ ವೇಗವಾಗಿ ವಿದ್ಯಾರ್ಥಿಗಳಿಗೆ ಒದಗಿಸಲು ಸಾಧ್ಯವಾಗುತ್ತದೆ. ಈ ಯೋಜನೆಯನ್ನು ಹಂತ-ಹಂತವಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಮಾತ್ರವಲ್ಲದೇ ಶಾಲಾ-ಕಾಲೇಜು(ಪಿಯುಸಿ) ಗಳಲ್ಲಿಯೂ ಮುಂದಿನ ದಿನಗಳಲ್ಲಿ ವಿಸ್ತರಿಸಬಹುದು ಎಂದು ಸಭೆಗೆ ತಿಳಿಸಿದರು. ಈ ಯೋಜನೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕೇವಲ ಮೂಲಭೂತ ಸೌಕರ್ಯ(Basic Infrastructure) ಮತ್ತು ಸಂಬಂಧಿಸಿದ ಪ್ರಕಾಶಕರು, ವಿತರಕರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಅವಶ್ಯವಿರುತ್ತದೆ ಎಂದರು.<br>ಚರ್ಚಿಸಿದ ಸಭೆಯು, ಈ ಯೋಜನೆ ಹಾಗೂ ಕನ್ಸಲ್ಟಂಸಿಯು ವಿನೂತನವಾಗಿದ್ದು, ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ವೃದ್ಧಿಸಲು ಸಹಕಾರಿಯಾಗುತ್ತದೆ ಹಾಗೂ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಆದಾಯವನ್ನು ಕೂಡ ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ Digital Desk Lab ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು. |
| 18 | 2024/08/18 | 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2023-24**ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಸದರಿ ವಾರ್ಷಿಕ ಲೆಕ್ಕಪತ್ರವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 19 | 2024/08/19 | ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು. |
| ತೀರ್ಮಾನ | | ದಿನಾಂಕ: **08.08.2024** ರಂದು ಜರುಗಿದ **2024-25**ನೇ ಸಾಲಿನ ಮೊದಲನೇ ಹಣಕಾಸು ಸಮಿತಿ ಸಭೆಯು ನಡಾವಳಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 20 | 2024/08/20 | PM-USHA ಯೋಜನೆಯಡಿಯಲ್ಲಿ MERU ಯೋಜನೆಗೆ ಸಲ್ಲಿಸಿದ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸುವ ಕುರಿತು. |
| ತೀರ್ಮಾನ | | ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ ಯೋಜನೆಯಡಿಯಲ್ಲಿ MERU ಯೋಜನೆಗೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಮಂಡಳಿಯು ಅನುಮೋದಿಸಿದೆ. ಅದರಂತೆ ಕರ್ನಾಟಕ ಸಂಪುಟ ಸಭೆಯಲ್ಲಿ **101** ಕೋಟಿ ಅನುದಾನಕ್ಕೆ ಆದೇಶವನ್ನು ಹೊರಡಿಸಿರುತ್ತಾರೆ. ಆದೇಶದನ್ವಯ ಅದರಲ್ಲಿನ ರೂ. **01** ಕೋಟಿಯನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಆದೇಶಿಸಿರುತ್ತಾರೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಅನುದಾನ ಮಂಜೂರಾದ ಹಿನ್ನೆಲೆಯಲ್ಲಿ ಹರ್ಷ ವ್ಯಕ್ತಪಡಿಸಿ ಪ್ರಸ್ತಾವನೆಯಲ್ಲಿ ಇರುವಂತೆ ಹಂತ-ಹಂತವಾಗಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೊಳಿಸಲಾಗುವುದು ಹಾಗೂ ಪ್ರಸ್ತಾವನೆ ಕುರಿತು ಹೆಚ್ಚುವರಿ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಗೆ ನೀಡಿದರು.<br>ಕಾರಣ, ತ್ವರಿತವಾಗಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಮತ್ತು ವಿವಿಧ ವೈಜ್ಞಾನಿಕ ಉಪಕರಣಗಳನ್ನು ಖರೀದಿಸಲು ಮತ್ತು MERU ಯೋಜನೆಗೆ ಸಲ್ಲಿಸಿದ ಯೋಜನಾ ವರದಿಯನ್ನು ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | |
|---|---|---|
| 21 | 2024/08/21 | Works Committee ಸಭೆಯ ನಡಾವಳಿ ಅನುಮೋದನೆ ಕುರಿತು. |
| ತೀರ್ಮಾನ | | Works Committee ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |
| 22 | 2024/08/22 | ಸ್ಥಳೀಯ ಸ್ಥಾನಿಕ ತನಿಖಾ ಸಮಿತಿ/ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವ ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಲಿಪಿಕ ಸಿಬ್ಬಂದಿಗಳಿಗೆ ಪ್ರತಿ ಕಾಲೇಜಿನಂತೆ ನೀಡುವ ಗೌರವಧನದ ಕುರಿತು |
| ತೀರ್ಮಾನ | | ಸ್ಥಳೀಯ ಸ್ಥಾನಿಕ ತನಿಖಾ ಸಮಿತಿ/ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವ ಅಧ್ಯಕ್ಷರಿಗೆ, ಸದಸ್ಯರಿಗೆ ಮತ್ತು ಲಿಪಿಕ ಸಿಬ್ಬಂದಿಗಳಿಗೆ ಪ್ರತಿ ಕಾಲೇಜಿನಂತೆ ಈ ಕೆಳಕಾಣಿಸಿದಂತೆ ಗೌರವಧನ ನೀಡುವ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |

| ಸಂ | ಸ್ಥಳೀಯ ತನಿಖಾ ಸಮಿತಿ ಸದಸ್ಯರು | ಪ್ರತಿ ಮಹಾವಿದ್ಯಾಲಯದ ಪರಿಶೀಲನೆಗಾಗಿ ನೀಡುವ ಗೌರವಧನ |
|---|---|---|
| 1 | ಅಧ್ಯಕ್ಷರು | ರೂ.700/- |
| 2 | ಸದಸ್ಯರು | ರೂ.500/- |
| 3 | ಲಿಪಿಕ ಸಿಬ್ಬಂದಿ | ರೂ. 300/- |

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು

| | | |
|---|---|---|
| I | 2024/08/ I | ಬಿ.ಎಸ್ಸಿ ಕೋರ್ಸಿಗೆ ನಿಗದಿಪಡಿಸಲಾದ ಶುಲ್ಕವನ್ನು ಬಿಎಸ್.ಡಬ್ಲ್ಯೂ ಕೋರ್ಸಿಗೆ ನಿಗದಿಪಡಿಸುವ ಕುರಿತು |
| ತೀರ್ಮಾನ | | 2024-25ನೇ ಶೈಕ್ಷಣಿಕ ಸಾಲಿನಿಂದ ಬಿ.ಎ. ಕೋರ್ಸಿಗೆ ನಿಗದಿಪಡಿಸಲಾದ ಶುಲ್ಕವನ್ನು ಬಿಎಸ್.ಡಬ್ಲ್ಯೂ ಕೋರ್ಸಿಗೆ ನಿಗದಿಪಡಿಸಲು ಸಭೆಯು ಅನುಸಮರ್ಥನೆ ನೀಡಿತು. |
| II | 2024/08/ II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮರಾಠಿ ವಿಭಾಗದ ಅಧ್ಯಾಪಕರುಗಳು ಸಿ.ಎ.ಎಸ್. ಅಡಿಯಲ್ಲಿ ಸಹಾಯಕ ಪ್ರಾಧ್ಯಾಪಕರ ಹಂತ 12 ರಿಂದ 13ಎ ಸಹ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಗಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮರಾಠಿ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ ಡಾ. ಸಂಜಯ ಕಾಂಬಳೆ ಹಾಗೂ ಡಾ. ಎಂ. ಎಂ. ಮುತಾವಳಿ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ವೃತ್ತಿ ಪದೋನ್ನತಿಗೆ ಅರ್ಜಿಯನ್ನು ಸಲ್ಲಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.<br>ಮರಾಠಿ ವಿಭಾಗದಲ್ಲಿನ ಬೋಧನಾ ಕಾರ್ಯಭಾರದಲ್ಲಿ ಕೊರತೆ ಹಾಗೂ ವಿದ್ಯಾರ್ಥಿಗಳ ಪ್ರವೇಶಾತಿಯು ಕಡಿಮೆ ಇರುವುದನ್ನು ಗಮನಿಸಿದ ಸಭೆಯು ಪದೋನ್ನತಿಗೆ 06 ಸಂಶೋಧನಾ ಪತ್ರಿಕೆಗಳನ್ನು(Articles) ಕಡ್ಡಾಯವಾಗಿ ಪ್ರಕಟಿಸುವ ಮಾನದಂಡವನ್ನು ನಿಗದಿಪಡಿಸಿತು. ಈ ನಿಯಮವು ಕಾರ್ಯಭಾರ ಕೊರತೆ ಇರುವ ವಿಶ್ವವಿದ್ಯಾಲಯದ ಇತರೇ ವಿಭಾಗಗಳಿಗೂ ಅನ್ವಯಿಸಲು ಸೂಚಿಸಿತು.<br>ಮುಂದುವರೆದು, ಮರಾಠಿ ವಿಭಾಗಕ್ಕೆ ಪ್ರವೇಶಾತಿ ಕಡಿಮೆಯಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು, ವಿಭಾಗವನ್ನು ಮರಾಠಿ ಭಾಷೆಗೆ ಹೆಚ್ಚು ಬೇಡಿಕೆ ಇರುವ ಕಡೆಗೆ(ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ ಅಥವಾ ಡಾ. ಆರ್. ಡಿ.ರಾನಡೆ ಮಹಾವಿದ್ಯಾಲಯ) ಸ್ಥಳಾಂತರಿಸಲು ತೀರ್ಮಾನಿಸಿತು. |
| III | 2024/08/ III | ಸುಮಂತ್. ಎಸ್. ಹಿರೇಮಠ, ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ರಾಚವಿವಿ ಇವರು Johannesburg, South Africa ಇಲ್ಲಿ ಜರುಗಲಿರುವ World Anthropoligical Union ನಲ್ಲಿ ಭಾಗವಹಿಸಲು ಅನುಮತಿ, ಸೇವಾ ಪ್ರಮಾಣ ಪತ್ರ, ಓಡಿ ಮತ್ತು 03 ತಿಂಗಳ ವೇತನ ಪ್ರಮಾಣ ಪತ್ರವನ್ನು ನೀಡಲು ವಿನಂತಿಸಿರುವ ಕುರಿತು. |
| ತೀರ್ಮಾನ | | ಡಾ. ಸುಮಂತ್ ಎಸ್. ಹಿರೇಮಠ, ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಇವರಿಗೆ World Anthropological Union(WAU) Congress at Johannesburg, South Africa ಇಲ್ಲಿ ದಿನಾಂಕ: 09.11.2024 ರಿಂದ 17.11.2024 ರವರೆಗೆ(ಪ್ರಯಾಣ ದಿನಗಳನ್ನು ಒಳಗೊಂಡು) "World Anthropological Union(WAU) Congress" ನಲ್ಲಿ ಯಾವುದೇ ಹಣಕಾಸಿನ ಸೌಲಭ್ಯವಿಲ್ಲದೇ Oral Paper Presentation ನೀಡುವುದಕ್ಕೆ ಭಾಗವಹಿಸಲು ಅನುಮತಿ, ನಿರಾಕ್ಷೇಪಣಾ ಪ್ರಮಾಣ ಪತ್ರ, ಕಛೇರಿ ಕೆಲಸ ರಜೆ(ಓಡಿ) ಹಾಗೂ ಸೇವಾ ಪ್ರಮಾಣ ಪತ್ರವನ್ನು ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು. |

| | | |
|---|---|---|
| IV | 2024/08/ IV | ಪರೀಕ್ಷಾ ವಿಭಾಗದ UUCMS Software ನಿರ್ವಹಣಾ ಕಾರ್ಯಕ್ಕೆ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳುವ ಕಾರ್ಯದ ಅಂದಾಜು ಪಟ್ಟಿಗೆ ಅನುಮೋದನೆ ಕುರಿತು. |
| ತೀರ್ಮಾನ | | **2023-24 ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳನ್ನು** ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಒದಗಿಸಲಾದ **UUCMS** ತಂತ್ರಾಂಶದ ಮೂಲಕ ಕೈಗೊಳ್ಳಬೇಕಾಗಿದ್ದು, ವಿದ್ಯಾರ್ಥಿಗಳ ಪರೀಕ್ಷಾ ಪೂರ್ವ ಹಾಗೂ ನಂತರದ ಕಾರ್ಯಗಳಾದ **coding, Decoding, Marks entry, Marks entry form uploading, coding & Decoding for Revaluation** ಇತ್ಯಾದಿ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ಮಾಡಲು **20** ಗಣಕಯಂತ್ರಗಳನ್ನೊಳಗೊಂಡ ಗಣಕ ವಿಭಾಗವನ್ನು ಸ್ಥಾಪಿಸಿ, ಕಂಪ್ಯೂಟರ್ ಜ್ಞಾನವಿರುವ ನುರಿತ **20** ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲು ಹಾಗೂ ಮೌಲ್ಯಮಾಪನ ಕಾರ್ಯ ಪ್ರಾರಂಭವಾದಾಗ ತಾತ್ಕಾಲಿಕವಾಗಿ **100** ಡಾಟಾ ಎಂಟ್ರಿ ಆಪರೇಟರ್‌ಗಳನ್ನು (ಒಟ್ಟು **05** ಮೌಲ್ಯಮಾಪನ ಕೇಂದ್ರಗಳಲ್ಲಿ, ಪ್ರತಿ ಮೌಲ್ಯಮಾಪನ ಕೇಂದ್ರಕ್ಕೆ **20** ಸಿಬ್ಬಂದಿಗಳಂತೆ) ನಿಯೋಜಿಸಿಕೊಳ್ಳಲು ದಿನಾಂಕ **29.01.2024** ರಂದು ನಡೆದ ಸಿಂಡಿಕೇಟ್ ಸಭೆಯು ಸೂಚಿಸಿತ್ತು.<br>ಅದರಂತೆ, ಪರೀಕ್ಷಾ ವಿಭಾಗದ **UUCMS** ತಂತ್ರಾಂಶ ನಿರ್ವಹಣೆಯ ಗಣಕ ವಿಭಾಗಕ್ಕೆ ಕಂಪ್ಯೂಟರ್ ಜ್ಞಾನವಿರುವ ನುರಿತ **20** ಸಿಬ್ಬಂದಿಗಳ ಪೈಕಿ ಪ್ರಸ್ತುತ **05 Technical Assistants** ಹಾಗೂ **13 Data Entry Operators** ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ನಿಯೋಜಿಸಿಕೊಳ್ಳಲು ಖರ್ಚಾಗಬಹುದಾದ ವಾರ್ಷಿಕ ಅಂದಾಜು ಪಟ್ಟಿಗೆ ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಿತು. ಮುಂದುವರೆದು, ಮುಂದಿನ ದಿನಗಳಲ್ಲಿ ಮೌಲ್ಯಮಾಪನ ಸಮಯದಲ್ಲಿ ಬೇಕಾಗಬಹುದಾದ **100** ಡಾಟಾ ಎಂಟ್ರಿ ಆಪರೇಟರ್‌ಗಳನ್ನು (ಒಟ್ಟು 05 ಮೌಲ್ಯಮಾಪನ ಕೇಂದ್ರಗಳಲ್ಲಿ, ಪ್ರತಿ ಮೌಲ್ಯಮಾಪನ ಕೇಂದ್ರಕ್ಕೆ 20 ಸಿಬ್ಬಂದಿಗಳಂತೆ) ಅವಶ್ಯಕತೆಯನುಸಾರ ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| V | 2024/08/ V | ಪ್ರೊ. ಎಂ. ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರು ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿಯ ಶಿಕ್ಷಣ ವಿಭಾಗಕ್ಕೆ ವರ್ಗಾವಣೆಗೆ NOC ನೀಡಲು ಮನವಿ ಸಲ್ಲಿಸಿರುವ ಕುರಿತು. |
| ತೀರ್ಮಾನ | | ಪ್ರೊ. ಎಂ. ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಇವರು ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿಯ ಶಿಕ್ಷಣ ವಿಭಾಗಕ್ಕೆ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ (**NOC**) ನೀಡಲು ಸಲ್ಲಿಸಿರುವ ಮನವಿಯನ್ನು ಸಭೆಗೆ ಪ್ರಸ್ತುಪಡಿಸಲಾಯಿತು.<br>ಸದರಿಯವರು ತೀವ್ರ ಅನಾರೋಗ್ಯದಿಂದ ಬಳುತ್ತಿದ್ದು ವೈದ್ಯಕೀಯ ತಪಾಸಣೆಯ ದಾಖಲಾತಿಗಳನ್ನು ಸಭೆಯು ಪರಿಶೀಲಿಸಿತು ಹಾಗೂ ಮಾನವೀಯ ಆಧಾರದ ಮೇಲೆ ಪ್ರೊ. ಎಂ. ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತಿಯ ಶಿಕ್ಷಣ ವಿಭಾಗಕ್ಕೆ ಹುದ್ದೆ ರಹಿತವಾಗಿ(without post) ವರ್ಗಾಯಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ (**NOC**) ನೀಡಲು ಅನುಮೋದನೆ ನೀಡಿತು.<br>ಮುಂದುವರೆದು, ಹೀಗೆ ಶಿಕ್ಷಣ ವಿಭಾಗದಲ್ಲಿ ತೆರವಾಗುವ ಪ್ರಾಧ್ಯಾಪಕರ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಮತ್ತು ಆರ್ಥಿಕ ಇಲಾಖೆಯಿಂದ ಅನುಮತಿಗೆ ಜವಾಬ್ದಾರಿಯನ್ನು ಅರ್ಜಿದಾರರಿಗೆ ವಹಿಸಿಕೊಳ್ಳಲು ಸೂಚಿಸಿತು. ಸದರಿ ಮಂಜೂರಾತಿ ದೊರೆತ ನಂತರ ವರ್ಗಾವಣೆ ಪ್ರಕ್ರಿಯೆಯನ್ನು ಜಾರಿಗೊಳಿಸಲು ಅನುಮತಿಸಿತು. |
| VI | 2024/08/ VI | ವಿಶ್ವವಿದ್ಯಾಲಯದಲ್ಲಿ ಕುಸಿಯುತ್ತಿರುವ ಬೋಧನಾ ಗುಣಮಟ್ಟ ಹಾಗೂ ಬೋಧಕೇತರ ಸಿಬ್ಬಂದಿಗಳ ದಿನನಿತ್ಯದ ಕಾರ್ಯಭಾರ ಹಾಗೂ ಚಟುವಟಿಕೆಗಳ ಬಗ್ಗೆ ಚರ್ಚಿಸುವ ಕುರಿತು |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕುಸಿಯುತ್ತಿರುವ ಬೋಧನಾ ಗುಣಮಟ್ಟ, ಕೆಲವು ಬೋಧಕ ಸಿಬ್ಬಂದಿಗಳು ಸರಿಯಾದ ಸಮಯಕ್ಕೆ ತರಗತಿಗಳನ್ನು ನಡೆಸುತ್ತಿಲ್ಲ ಹಾಗೂ ಬೋಧಕೇತರ ಸಿಬ್ಬಂದಿಗಳ ದಿನನಿತ್ಯದ ಕಛೇರಿ ಕಾರ್ಯ ನಿರ್ವಹಿಸುವಲ್ಲಿ ಸಂಪೂರ್ಣ ನಿಷ್ಠೆ ಶ್ರದ್ಧೆ ತೋರದೆ ಇರುವುದು ಕಂಡು ಬರುತ್ತಿದೆ. ಈ ವಿಷಯವಾಗಿ ವಿವಿಧ ಆಡಳಿತ ಮತ್ತು ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು ದೂರನ್ನು ಸಲ್ಲಿಸಿರುತ್ತಾರೆ. ಕಾರಣ ದಿನನಿತ್ಯದ ಕಛೇರಿ ಕೆಲಸ ನಿರ್ವಹಿಸುವಲ್ಲಿ ತೊಂದರೆ ಮತ್ತು ವಿಳಂಬವಾಗುತ್ತಿರುವ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.<br>ಚರ್ಚಿಸಿದ ಸಭೆಯು, ಅಂತಹ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನಡೆಯನ್ನು ಕರ್ತವ್ಯ ಲೋಪ(derelection of duty) ಎಂದು ಪರಿಗಣಿಸಲು ಸಭೆಯು ತೀರ್ಮಾನಿಸಿತು ಹಾಗೂ ಈ ಕುರಿತು ಕುಲಸಚಿವರು ಸೂಕ್ತ ಕ್ರಮ ಕೈಗೊಳ್ಳಲು(ನಿಯಮಾನುಸಾರ ನೋಟಿಸ್ ಜಾರಿ ಮಾಡಿ ಸೇವಾ |

| | | |
|---|---|---|
| | | ಪುಸ್ತಕದಲ್ಲಿ ನಮೂದಿಸುವುದು) ಸೂಚಿಸಿತು. ಈ ಮಾಹಿತಿಯನ್ನು ಎಲ್ಲ ಸಿಬ್ಬಂದಿಗಳಿಗೆ ಸುತ್ತೋಲೆ ಮುಖಾಂತರ ತಿಳಿಸಲು ಸೂಚಿಸಿತು. |
| VII | 2024/08/ VII | ಶ್ರೀ ರಾಘವೇಂದ್ರ ಅನ್ವೇಕರ, ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕ್ರೀಡೆಯಲ್ಲಿನ ಸಾಧನೆಯನ್ನು ಗುರುತಿಸಿ ವಿಶೇಷ ಮುಂಬಡ್ತಿ ನೀಡುವಂತೆ ಕೋರಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ರಾಘವೇಂದ್ರ ಅನ್ವೇಕರ ಇವರು ಎದ್ದು ಕಾಣುವ ಅಂಗವೈಕಲ್ಯರಾಗಿರುತ್ತಾರೆ ಹಾಗೂ ಏಷ್ಯನ್ ಗೇಮ್ಸ್ ಸೇರಿದಂತೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಪ್ಯಾರಾಸ್ವೀಮರ್(ಈಜುಗಾರ) ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಕೀರ್ತಿಯನ್ನು ತಂದಿರುತ್ತಾರೆ. ಭಾರತ ಸರ್ಕಾರವು ಅವರಿಗೆ "ರಾಷ್ಟ್ರೀಯ ಅತ್ಯುತ್ತಮ ಕ್ರೀಡಾಪಟು" ಕರ್ನಾಟಕ ಸರ್ಕಾರ "ಏಕಲವ್ಯ" ಪ್ರಶಸ್ತಿಗಳನ್ನು ಕೂಡ ನೀಡಿದೆ. ತಮ್ಮ ಕ್ರೀಡಾ ಸಾಧನೆಯನ್ನು ಗುರುತಿಸಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ವರ್ಗ ಎ ಮತ್ತು ಬಿ ಹುದ್ದೆಗೆ ಅಥವಾ ಸಮನಾಂತರ ಹುದ್ದೆಗೆ ಪದೋನ್ನತಿ ನೀಡುವಂತೆ ವಿನಂತಿಸಿರುವ ವಿಷಯಕ್ಕೆ ಸಭೆಯು ಸರ್ಕಾರಕ್ಕೆ ಸೂಕ್ತ ನಿರ್ದೇಶನ ಕೋರಿ ಪತ್ರ ಬರೆಯಲು ತೀರ್ಮಾನಿಸಿತು. |
| VIII | 2024/08/ VIII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿಗಳಿಗೆ ಪ್ರಥಮ ದರ್ಜೆ ಸಹಾಯಕರಾಗಿ ಪದೋನ್ನತಿ ನೀಡಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ 07 ಜನ ದ್ವಿತೀಯ ದರ್ಜೆ ಸಹಾಯಕರನ್ನು ಪ್ರಥಮ ದರ್ಜೆ ಸಹಾಯಕರಾಗಿ ಪದೋನ್ನತಿಯನ್ನು ಸರ್ಕಾರದ ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಗಳನ್ನು ಹಾಗೂ ಸಿಬ್ಬಂದಿಗಳ ಜೇಷ್ಠತೆಯನ್ನು ಪಾಲಿಸದೇ ಈ ಹಿಂದೆ ನೀಡಲಾಗಿದೆ. ಹಾಗೂ ಈ ಕುರಿತು ಸಿಂಡಿಕೇಟ್ ಅನುಮೋದನೆಯನ್ನು ಕೂಡ ಪಡೆದಿರುವುದಿಲ್ಲ. ಕಾರಣ ಸಭೆಯ ಸೂಕ್ತ ನಿರ್ದೇಶನ ಕೋರಲಾಯಿತು. ಚರ್ಚಿಸಿದ ಸಭೆಯು, ಹಣಕಾಸು ಅಧಿಕಾರಿಗಳಾದ ಶ್ರೀಮತಿ ಎಂ.ಎ. ಸಪ್ನ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ತೀರ್ಮಾನಿಸಿತು. ಸದರಿ ಸಮಿತಿಯು ಸಲ್ಲಿಸುವ ವರದಿಯ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿತು. |
| IX | 2024/08/ IX | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ ಇಲ್ಲಿ ಕನಿಷ್ಠ 50 ಎಕರೆ ಜಾಗವನ್ನು ಉಳಿಸಿಕೊಳ್ಳಲು ಸರಕಾರಕ್ಕೆ ಮನವಿ ಸಲ್ಲಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಕಟ್ಟಡವು ಹಿರೇಬಾಗೇವಾಡಿ-ಹಾಲಗಿಮರಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿದ್ದು ಇನ್ನು ಕೆಲವೇ ವರ್ಷಗಳಲ್ಲಿ ವಿಶ್ವವಿದ್ಯಾಲಯವು ಸ್ಥಳಾಂತರವಾಗುತ್ತದೆ. ಆದರೆ, ಭವಿಷ್ಯದಲ್ಲಿ ಆಡಳಿತ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಪ್ರಸ್ತುತ ಇರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ ಇಲ್ಲಿರುವ 50 ಎಕರೆ ಜಮೀನನ್ನು ಉಳಿಸಿಕೊಳ್ಳುವುದು ಅವಶ್ಯವಿರುವದರಿಂದ ಈ ವಿಷಯವಾಗಿ ಸರಕಾರಕ್ಕೆ ಮನವಿ ಸಲ್ಲಿಸಲು ಸಭೆಯು ತೀರ್ಮಾನಿಸಿತು. |
| X | 2024/08/ X | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ Education App ಅನ್ನು ಬಳಸಲು ಶುಲ್ಕ ಆಕರಣೆ ಮಾಡುವ ಕುರಿತು. |
| ತೀರ್ಮಾನ | | ದಿನಾಂಕ: 14.06.2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯಿಸಿದಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ **Education App** ಪ್ರಾರಂಭದ ಹಂತದಲ್ಲಿದೆ. ಸದರಿ **App** ಬಳಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರತಿ ಸೆಮಿಸ್ಟರಗೆ ರೂ.125/- ಗಳಂತೆ ಪ್ರತಿ ವರ್ಷ ಒಟ್ಟು ರೂ.250/- ಗಳನ್ನು ಆಕರಣೆ ಮಾಡಲು ಹಾಗೂ ಸದರಿ ಶುಲ್ಕವನ್ನು ಶುಲ್ಕ ವಿವರಣಾ ಪಟ್ಟಿಯಲ್ಲಿ (**Fees structure**) ಅಳವಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| XI | 2024/08/ XI | ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಹಾಗೂ ಗಣಿತಶಾಸ್ತ್ರ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಕುರಿತು. |
| ತೀರ್ಮಾನ | | **2024-25 ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೇಂದ್ರ ವಿಜಯಪುರದಲ್ಲಿ ರಾಜ್ಯಶಾಸ್ತ್ರ,(Political Science) ಸಮಾಜಶಾಸ್ತ್ರ, (Sociology) ಅರ್ಥಶಾಸ್ತ್ರ(Economics) ಹಾಗೂ ಗಣಿತಶಾಸ್ತ್ರ(Mathematics) ಸ್ನಾತಕೋತ್ತರ ಕೋರ್ಸುಗಳಿಗೆ 30 ಪ್ರವೇಶ ಮಿತಿಯನ್ನು ನಿಗದಿಪಡಿಸಿ, ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.** |
| XII | 2024/08/ XII | 2024-25 ನೇ ಸಾಲಿನಿಂದ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಸೂಕ್ಷ್ಮಜೀವ ವಿಜ್ಞಾನ ಮತ್ತು ಜೀವರಸಾಯನಶಾಸ್ತ್ರ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಕುರಿತು. |

| | | |
|---|---|---|
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಶ್ರೀ ಜಿ.ಎಸ್.ಎಸ್ ಸ್ನಾತಕೋತ್ತರ ಪದವಿ ಮಹಾವಿದ್ಯಾಲಯವು **2024-25** ನೇ ಸಾಲಿನಿಂದ ಹತ್ತು ವರ್ಷಗಳವರೆಗೆ ಸ್ವಾಯತ್ತ ಮಹಾವಿದ್ಯಾಲಯ (**Autonomous**) ಸ್ಥಾನವನ್ನು ಪಡೆದುಕೊಂಡಿರುತ್ತದೆ. ಸದರಿ ಮಹಾವಿದ್ಯಾಲಯದಲ್ಲಿರುವ ಸ್ನಾತಕೋತ್ತರ ಕೋರ್ಸುಗಳಾದ ಸೂಕ್ಷ್ಮ ಜೀವವಿಜ್ಞಾನ (**Micro-Biology**) ಮತ್ತು ಜೀವರಸಾಯನಶಾಸ್ತ್ರ(**Bio-Chemistry**) ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಇಲ್ಲದೇ ಇರುವುದರಿಂದ ಹಾಗೂ **PM-USHA** ಅಡಿಯಲ್ಲಿ ಸದರಿ ಕೋರ್ಸಗಳ ವಿವರಣೆಯನ್ನು ಈಗಾಗಲೇ ನೀಡಿರುವುದರಿಂದ, ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಸದರಿ ಕೋರ್ಸುಗಳ ವಿಭಾಗಗಳಿಗೆ ತಲಾ **20** ಪ್ರವೇಶ ಮಿತಿಯನ್ನು ನಿಗದಿಪಡಿಸಿ ಪ್ರಾರಂಭಿಸಲು ಹಾಗೂ ತರಗತಿಗಳನ್ನು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿ ನಡೆಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| XIII | 2024/08/ XIII | ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠಕ್ಕೆ ತಾತ್ಕಾಲಿಕ ಸಂಶೋಧನ ಸಹಾಯಕರು ಮತ್ತು ಸಹಾಯಕರು/ಬೆರಳಚ್ಚುಗಾರ ಹುದ್ದೆಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿರುವ ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ತಾತ್ಕಾಲಿಕ ಸಂಶೋಧನ ಸಹಾಯಕ-**01** ಮತ್ತು ಸಹಾಯಕರು/ಬೆರಳಚ್ಚುಗಾರ-**01** ಒಟ್ಟು-**02** ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿತ್ತು. ಅದರಂತೆ ಸಂಶೋಧನ ಸಹಾಯಕ-**01** ಹುದ್ದೆಗೆ **08** ಮತ್ತು ಸಹಾಯಕ/ಬೆರಳಚ್ಚುಗಾರ-**01** ಹುದ್ದೆಗೆ **22** ಜನ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಭ್ಯರ್ಥಿಗಳಿಗೆ ದಿನಾಂಕ: **10.08.2024** ರಂದು ಸಂದರ್ಶನ ಜರುಗಿಸಿ ಜೇಷ್ಠತೆ ಆಧಾರದ ಮೇಲೆ ಸಂಶೋಧನ ಸಹಾಯಕ ಹುದ್ದೆಗೆ ಆಯ್ಕೆಯಾದ ಶ್ರೀ ಯಲ್ಲಪ್ಪ ಮೂಡಲಗಿ ಹಾಗೂ ಸಹಾಯಕ/ಬೆರಳಚ್ಚುಗಾರ ಹುದ್ದೆಗೆ ಆಯ್ಕೆಯಾದ ಶ್ರೀ ಸುರೇಶ ಜಂಗೋಣಿ ಇವರುಗಳಿಗೆ ವಿಶ್ವವಿದ್ಯಾಲಯದ ನಿಯಮಾವಳಿಗಳನ್ವಯ ನೇಮಕಾತಿ ಆದೇಶ ನೀಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| XIV | 2024/08/ XIV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಕಾರ್ಯವೈಖರಿ ಬಗ್ಗೆ ಕರಡು ಪರಿನಿಯಮವನ್ನು ರಚಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಈಗಾಗಲೇ ಪದೋನ್ನತಿ ನೀಡಲಾಗಿದೆ. ಪದೋನ್ನತಿ ಹೊಂದಿದ ಕೆಲವು ಸಿಬ್ಬಂದಿಗಳು ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸುತ್ತಿದ್ದು ಇನ್ನು ಕೆಲವು ಸಿಬ್ಬಂದಿಗಳು ಗುಣಮಟ್ಟದ ಕೆಲಸ ನಿರ್ವಹಿಸಲು ವಿಫಲವಾಗುತ್ತಿರುವುದು ಮೇಲಾಧಿಕಾರಿಗಳ ಗಮನಕ್ಕೆ ಕಂಡುಬಂದಿರುತ್ತದೆ. ಕಾರಣ, ಅಂತಹ ಪದೋನ್ನತಿ ಹೊಂದಿರುವ/ಹೊಂದುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಕಾರ್ಯವೈಖರಿ ಬಗ್ಗೆ ಒಂದು ಕರಡು ಪರಿನಿಯಮವನ್ನು ರಚಿಸಲು ಸಭೆಯು ಅನುಮೋದನೆ ನೀಡಿತು. |
| XV | 2024/08/ XV | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ತಮ್ಮ ಆಸ್ತಿ ವಿವರವನ್ನು ಘೋಷಣೆ ಮಾಡುವಂತೆ ತಿಳಿಸಲು ಅನುಮತಿ ನೀಡುವ ಕುರಿತು |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಕರ್ನಾಟಕ ಸಿವಿಲ್ ಸೇವಾ(ನಡತೆ) ನಿಯಮಗಳ **1966** ರ ಖಂಡಿಕೆ **23** ರನ್ವಯ ತಮ್ಮ ಆಸ್ತಿ ವಿವರವನ್ನು (ಚರ, ಸ್ಥಿರ ಮತ್ತು ಬೆಲೆ ಬಾಳುವ ಆಸ್ತಿ(ಸ್ವತ್ತು) ಘೋಷಣೆ ಮಾಡುವಂತೆ ತಿಳಿಸಲು ಸಭೆಯು ಅನುಮೋದನೆ ನೀಡಿತು. |
| XVI | 2024/08/ XVI | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಗೆ Jio 100mbps ILL (Internet Leased Line) ಇಂಟರ್ನೆಟ್ ಸೇವೆಯನ್ನು ಪಡೆಯುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಗೆ **BSNL 20mbps ILL (Internet Leased Line)** ಕಾರ್ಪೋರೇಟ್ ಸೇವೆ ಪಡೆಯಲಾಗುತ್ತಿದ್ದು, ಮೇಲಿಂದ ಮೇಲೆ ಇಂಟರ್ನೆಟ್ ವ್ಯತಿರಿಕ್ತವಾಗುತ್ತಿರುವ ಕಾರಣ ಹಾಗೂ ನೂತನವಾಗಿ ನಿರ್ಮಾಣವಾಗಿರುವ ಕಟ್ಟಡಕ್ಕೆ ಕೂಡಾ ಇಂಟರ್ನೆಟ್ ಸೌಲಭ್ಯ ಪೂರೈಸಬೇಕಾಗಿದ್ದರಿಂದ, **20mbps** ಸಾಕಾಗುವುದಿಲ್ಲ. ಅಲ್ಲದೇ ಆನ್‌ಲೈನ್ ಕೆಲಸಗಳು ಜೊತೆಗೆ ಕಾಲೇಜಿನ ಎಲ್ಲ ಕಟ್ಟಡಗಳಿಗೆ ಇಂಟರ್ನೆಟ್ ಪೂರೈಸುವುದು ಕಷ್ಟವಾಗುತ್ತಿದೆ. ಹೀಗಾಗಿ ಬಳಕೆದಾರರು (ಕಾಲೇಜಿನ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು) ಮಾಡುತ್ತಿರುವ ಕೆಲಸಗಳು ಸರಾಗವಾಗಿ ಆಗುತ್ತಿಲ್ಲ ಹಾಗೂ Digital Publishing Desk ಸ್ಥಾಪಿಸಲು ಅಗತ್ಯವಾಗಿರುವುದರಿಂದ ಪ್ರಾಂಶುಪಾಲರು ಈ ಕುರಿತು ಪರಿಹಾರ ನೀಡುವಂತೆ ವಿನಂತಿಸಿರುವುದರಿಂದ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಗೆ **Jio 100 mbps ILL (Internet Leased Line)** ಇಂಟರ್ನೆಟ್ ಸೇವೆ ಪಡೆಯಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| XVII | 2024/08/ XVII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ Jio 200mbps ILL (Internet Leased Line) ಇಂಟರ್ನೆಟ್ ಸೇವೆಯನ್ನು ಪಡೆಯುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ **BSNL 100mbps ILL (Internet Leased Line)** ಕಾರ್ಪೊರೇಟ್ ಸೇವೆ ಪಡೆಯಲಾಗಿದ್ದು, ಮೇಲಿಂದ ಮೇಲೆ ಇಂಟರ್ನೆಟ್ ವ್ಯತಿರಿಕ್ತವಾಗುತ್ತಿರುವ ಕಾರಣ ಆನ್‌ಲೈನ್ ಕೆಲಸಗಳು ಜೊತೆಗೆ ವಿಶ್ವವಿದ್ಯಾಲಯದ ಎಲ್ಲ ಕಟ್ಟಡಗಳಿಗೆ ಇಂಟರ್ನೆಟ್ ಪೂರೈಸುವುದು ಕಷ್ಟವಾಗುತ್ತಿದೆ. ಅಲ್ಲದೇ ಸದರಿ ಸೇವಾ ಪೂರೈಕೆದಾರರು ಇಂಟರ್ನೆಟ್ ಸರಿಯಾಗಿ ಪೂರೈಸುತ್ತಿಲ್ಲ. ಹೀಗಾಗಿ ಬಳಕೆದಾರರು (ವಿಶ್ವವಿದ್ಯಾಲಯದ ಸಿಬ್ಬಂದಿಗಳು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು) ಮಾಡುತ್ತಿರುವ ಕೆಲಸಗಳು ಸರಾಗವಾಗಿ ಆಗುತ್ತಿಲ್ಲ.<br>ಆದ್ದರಿಂದ, **Jio 200 mbps ILL (Internet Leased Line)** ಇಂಟರ್ನೆಟ್ ಸೇವೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಪಡೆಯುವ ವಿಷಯಕ್ಕೆ ಸಭೆಯು ಅನುಮೋದನೆ ನೀಡಿತು. |
| XVIII | 2024/08/ XVIII | 2024–25 ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು 50:50 ಅನುಪಾತದಲ್ಲಿ (Hybrid Mode) ನಡೆಸುವ ಕುರಿತು. |
| ತೀರ್ಮಾನ | | **2024–25 ನೇ ಶೈಕ್ಷಣಿಕ ಸಾಲಿನಲ್ಲಿ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು 2023–24ನೇ ಶೈಕ್ಷಣಿಕ ಸಾಲಿನ 2, 4 ಮತ್ತು 6 ನೇ ಸೆಮಿಸ್ಟರ್‌ಗಳ ಪರೀಕ್ಷಾ ಮುಗಿದ ನಂತರ ಪ್ರಾರಂಭಿಸಬಹುದಾಗಿರುತ್ತದೆ. ಕೋವಿಡ್–19 ದಿಂದ ಶೈಕ್ಷಣಿಕ ವೇಳಾಪಟ್ಟಿಯು ನಿಗದಿತ ಸಮಯಕ್ಕಿಂತ ಮುಂದೂಡಿ ಕಾರ್ಯನಿರ್ವಹಿಸುತ್ತಿರುವದರಿಂದ ಹಾಗೂ ಪರೀಕ್ಷಾ ದಿನಾಂಕವು ಮುಂದೂಡಲ್ಪಟ್ಟಿದ್ದರಿಂದ 3 ಮತ್ತು 5 ನೇ ಸೆಮಿಸ್ಟರ್‌ಗಳ ತರಗತಿಗಳನ್ನು ನಡೆಸಬೇಕಾಗಿರುತ್ತದೆ. ಆದ್ದರಿಂದ 50% ಪ್ರತಿಶತ: ತರಗತಿಗಳನ್ನು ಆಫಲೈನ ಮುಖಾಂತರ ಹಾಗೂ ಉಳಿದ 50% ಪ್ರತಿಶತ: ತರಗತಿಗಳನ್ನು ಆನ್‌ಲೈನ್ ಮೂಲಕ ಹಾಗೂ ವಿಶೇಷ ತರಗತಿಗಳನ್ನು ಹಾಗೂ ಹೆಚ್ಚುವರಿ ತರಗತಿಗಳನ್ನು ಕೈಗೊಳ್ಳುವುದರ ಮೂಲಕ ಹಾಗೂ ಹಾಜರಾತಿಯನ್ನು ಆಫ್‌ಲೈನ್ ಮತ್ತು ಆನ್‌ಲೈನ್ ಎರಡರಲ್ಲೂ ಪಡೆದು ಕ್ರೋಢೀಕರಿಸಿ 75% ಹಾಜರಾತಿಯನ್ನು ಪಡೆದು 2024–25ನೇ ಶೈಕ್ಷಣಿಕ ಸೆಮಿಸ್ಟರ್‌ಗಳನ್ನು ಪೂರ್ಣಗೊಳಿಸಲು ಹಾಗೂ 50:50 ಅನುಪಾತದಲ್ಲಿ 2024–25ನೇ ಶೈಕ್ಷಣಿಕ ವೇಳಾಪಟ್ಟಿಯನ್ನು ತಯಾರಿಸಲು ಸಭೆಯು ಅನುಮೋದನೆ ನೀಡಿತು.** |
| XIX | 2024/08/ XIX | ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರ ಮತ್ತು ದೈಹಿಕ ಶಿಕ್ಷಕರ ವಿವರವನ್ನು ನೀಡದೆ ಇರುವ ಮಹಾವಿದ್ಯಾಲಯಗಳ ಮೇಲೆ ಕ್ರಮಕೈಗೊಳ್ಳುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯ ಸಂಯೋಜಿತ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳಿಗೆ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ದಿನಾಂಕ: 30–07–2024 ರಂದು ಗ್ರಂಥಪಾಲಕರ ಮತ್ತು ದೈಹಿಕ ಶಿಕ್ಷಕರ ವಿವರವನ್ನು ಗೂಗಲ್ ಲಿಂಕನಲ್ಲಿ ದಿನಾಂಕ: 05–08–2024 ರೊಳಗಾಗಿ ಸಲ್ಲಿಸಲು ಸುತ್ತೋಲೆಯ ಮೂಲಕ ತಿಳಿಸಲಾಗಿತ್ತು.<br>ಮುಂದುವರೆದು, ಸ್ನಾತಕ ಹಾಗೂ ಸ್ನಾತಕೋತ್ತರ 351 ಮಹಾವಿದ್ಯಾಲಯಗಳಲ್ಲಿ ಗ್ರಂಥಪಾಲಕರ ಮಾಹಿತಿಯನ್ನು 97 ಮಹಾವಿದ್ಯಾಲಯದವರು ಮತ್ತು ದೈಹಿಕ ಶಿಕ್ಷಕರ ಮಾಹಿತಿಯನ್ನು 101 ಮಹಾವಿದ್ಯಾಲಯದವರು ಸಲ್ಲಿಸಿರುತ್ತಾರೆ. ಸದರಿ ಮಾಹಿತಿಯನ್ನು ಸಲ್ಲಿಸದೇ ಇರುವ ಮಹಾವಿದ್ಯಾಲಯಗಳಿಗೆ 02 ತಿಂಗಳ ಒಳಗಾಗಿ ಮಾಹಿತಿ ಸಲ್ಲಿಸದೇ ಇದ್ದರೆ 5 ಲಕ್ಷ ರೂಪಾಯಿಗಳ ದಂಡ ವಿಧಿಸಿ ಶಿಸ್ತು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| XX | 2024/08/ XX | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ಇಂಟರ್ನೆಟ್ ನೆಟವರ್ಕ್ ಅಪ್‌ಗ್ರೇಡ್ ಮಾಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಟರ್ನೆಟ್ ನೆಟ್‌ವರ್ಕ್ ವ್ಯವಸ್ಥೆಯನ್ನು ಮೂರು ವರ್ಷಗಳ ಹಿಂದೆ ಅಂದರೆ ಏಪ್ರಿಲ್ 2021 ರಲ್ಲಿ ವಿಶ್ವವಿದ್ಯಾಲಯದ 5 ಕಟ್ಟಡಗಳಿಗೆ ಇ–ಟೆಂಡರ್ ಆಹ್ವಾನಿಸುವ ಮೂಲಕ **LAN** ಲೋಕಲ್ ಲ್ಯಾನ್ ನೆಟವರ್ಕಿಂಗ್ ಹಾಗೂ **Wi-Fi** ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಈಗ ವಿಶ್ವವಿದ್ಯಾಲಯದಲ್ಲಿ ಮೇಲಿಂದ–ಮೇಲೆ ಉಂಟಾಗುತ್ತಿರುವ ವಿದ್ಯುತ್ತ ವ್ಯತಿರಿಕ್ತತೆಗೆ ನೆಟ್‌ವರ್ಕ ಸಾಧನಗಳು (**Network Switch, Router, Controller, Firewall, Media converter, Wi-Fi access points etc…**) ಹಾಳಾಗುತ್ತಿವೆ. ಆದ್ದರಿಂದ, ವಿಶ್ವವಿದ್ಯಾಲಯದ ಎಲ್ಲ ಕಟ್ಟಡಗಳಿಗೆ ಸರಾಗವಾಗಿ ಇಂಟರ್ನೆಟ್ ಸೌಲಭ್ಯ ಪೂರೈಸಲು ಆಗುತ್ತಿಲ್ಲ. ಹಾಗೂ ಸದರಿ ಸಾಧನಗಳು **out off warranty** ಇರುವ ಕಾರಣ ಹೊಸದಾಗಿಯೇ ಅಳವಡಿಸಬೇಕಾಗುತ್ತದೆ.<br>ಆದ್ದರಿಂದ, ಸದರಿ ಸಂಪೂರ್ಣ ಇಂಟರ್ನೆಟ್ ನೆಟವರ್ಕ್ ತಪಾಸಿಸಿ ಹಾಗೂ ಅವಶ್ಯವಿರುವ ಸಾಧನಗಳನ್ನು ಅಳವಡಿಸುವ ಕಾರ್ಯ ಅವಶ್ಯವಾಗಿದೆ. ಆದ್ದರಿಂದ, ಸದರಿ ಕಾರ್ಯ ಕೈಗೊಳ್ಳಲು ಸುಮಾರು |

| | | |
|---|---|---|
| | | ರೂ.15 ಲಕ್ಷಗಳವರೆಗೆ ವೆಚ್ಚ ತಗಲಬಹುದಾಗಿದೆ. ಆದ್ದರಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| XXI | 2024/08/ XXI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಆಗುತ್ತಿರುವ ವಿದ್ಯುತ್ ವ್ಯತಿರಿಕ್ತತೆಯನ್ನು ತಡೆಯಲು Voltage Control Stabilizer – 3 PH ಅಳವಡಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಪಡೆದಿರುವ ವಿದ್ಯುತ ಸಂಪರ್ಕ **260 Volt** ಗಳವರೆಗೆ ವ್ಯತಿರಿಕ್ತವಾಗುತ್ತಿರುವುದ್ದರಿಂದ, **Electronic** ಸಾಧನಗಳು ಮೇಲಿಂದ– ಮೇಲೆ ಹಾಳಾಗುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವ್ಯತಿರಿಕ್ತತೆಯನ್ನು ತಡೆಯಲು **Voltage Control Stabilizer – 3 PH** ಅಳವಡಿಸುವುದು ಅವಶ್ಯವಾಗಿರುತ್ತದೆ. ಸದರಿ ಕಾರ್ಯವನ್ನು ಪ್ರೊ.ಬಿ.ಜಿ.ಹೆಗಡೆ ಇವರಿಗೆ ವಹಿಸಲಾಗಿದ್ದು, ಸದರಿಯವರು ಮೇಲ್ಕಾಣಿಸಿದ ವಿಷಯದ ಬಗ್ಗೆ ಪರಿಶೀಲಿಸಿ, ರೂ.4,93,599/– ಗಳ ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಕಾರಣ ಸದರಿ ಕಾರ್ಯ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |
| XII | 2024/08/ XXII | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯನ್ನು ಪ್ರತಿ ವರ್ಷ ವಿಶ್ವವಿದ್ಯಾಲಯ ಸ್ಥಾಪನೆಯಾದ ದಿನಾಂಕದಂದು ಆಚರಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ದಿನಾಂಕ: **09.09.2010** ರಂದು ಸ್ಥಾಪನೆಯಾಗಿದ್ದು, ಪ್ರತಿ ವರ್ಷ ಸಂಸ್ಥಾಪನಾ ದಿನಾಚರಣೆಯನ್ನು ಸ್ಥಾಪನೆಯಾದ ದಿನಾಂಕದಂದು ವಿಜ್ರಂಭಣೆಯಿಂದ ಆಚರಿಸಲು ಸಭೆಯು ಅನುಮೋದನೆ ನೀಡಿತು ಹಾಗೂ ಇದಕ್ಕೆ ತಗಲಬಹುದಾದ ವೆಚ್ಚವನ್ನು ಸಂದಾಯ ಮಾಡಲು ಸೂಚಿಸಿತು. |
| XXIII | 2024/08/ XXIII | ಬಿ.ಇಡ್ ಕೋರ್ಸ್‌ಗಳ ಆಂತರಿಕ ಅಂಕಗಳ(Internal Marks) ನಿಗದಿ ಕುರಿತು |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಬಿ.ಇಡ್ ಕೋರ್ಸ್‌ಗಳ ಆಂತರಿಕ ಅಂಕಗಳಲ್ಲಿ Internal Assessment is fixed as 70% to 95% with college average 85% ಮಾನದಂಡನೆಯನ್ನು ನಿಗದಿಪಡಿಸಲಾಗಿದೆ. ಸದರಿ ವಿಷಯಕ್ಕೆ ಸದಸ್ಯರುಗಳು ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಡಾ. ಶಾರದಾಮಣಿ ಎಸ್ ಹುಣಶಾಳ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು. |
| XXIV | 2024/08/ XXIV | ವಿಶ್ವವಿದ್ಯಾಲಯದ 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ನೀಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2022–23**ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |

**ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** **ಕುಲಪತಿಗಳು ಹಾಗೂ ಅಧ್ಯಕ್ಷರು**

**ಇವರಿಗೆ,**

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,**

**<u>ಪ್ರತಿ ಮಾಹಿತಿಗಾಗಿ :</u> ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.**